ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸಪತ್ರಿಕೆ

ಸಂಪುಟ : 7 । ಸಂಚಿಕೆ : 7 । ಜುಲೈ-2025 । ಪುಟಗಳು : 20 । ಬೆಲೆ : 25/-

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

#CoopsDay

ಜುಲೈ 5, 2025

## ಅಂತಾರಾಷ್ಟ್ರೀಯ ಸಹಕಾರ ದಿನ

ಧ್ಯೇಯ: "ಸಹಕಾರ / ಸಹಕಾರ ಸಂಘಗಳು : ಉತ್ತಮ ಜಗತ್ತಿಗಾಗಿ ಒಳಗೊಳ್ಳುವ ಮತ್ತು ಸುಸ್ಥಿರ ಪರಿಹಾರಗಳನ್ನು ಒದಗಿಸುತ್ತವೆ."



## ಸಹಕಾರ ಸಚಿವ ಕೆ.ಎನ್‌. ರಾಜಣ್ಣರವರ 75ನೇ ಹುಟ್ಟುಹಬ್ಬ : ಬೆಳ್ಳಿ ಗದೆ ನೀಡಿ ಶುಭ ಹಾರೈಕೆ

# ಸಹಕಾರ ಸಚಿವ ಕೆ.ಎನ್. ರಾಜಣ್ಣರವರ
# ಅಭಿನಂದನಾ ಗ್ರಂಥ ಬಿಡುಗಡೆ : ಸ್ಮರಣೀಯ ಕ್ಷಣಗಳು











# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು

## ಆಡಳಿತ ಮಂಡಳಿ


ಶಿದ್ದನಗೌಡ ಸಂಣರಾಮನಗೌಡ ಪಾಟೀಲ
ಸಹಕಾರಿ ಪಿತಾಮಹ


ಶ್ರೀ ಬಿ.ಎಲ್. ಲಕ್ಕೇಗೌಡರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು


ಎಸ್. ಚಂದ್ರಶೇಖರ್
ಅಧ್ಯಕ್ಷರು


ಧರೇಪ್ಪ ಎಂ. ಆಲಗೂರ
ಉಪಾಧ್ಯಕ್ಷರು


ಸಿ.ಎಂ. ಮಾರೇಗೌಡ
ನಿರ್ದೇಶಕರು


ಡಾ. ಬಿ.ಡಿ. ಭೂಕಾಂತ
ನಿರ್ದೇಶಕರು


ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು


ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ನಿರ್ದೇಶಕರು


ಎಂ.ಜೆ. ನರೇಂದ್ರಕುಮಾರ
ನಿರ್ದೇಶಕರು


ಕೆ. ಕೃಷ್ಣಮೂರ್ತಿ
ನಿರ್ದೇಶಕರು


ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು


ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು


ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು


ಉಮೇಶ ಶಿ. ಬಾಳಿ
ನಿರ್ದೇಶಕರು


ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು


ಡಾ. ನಾಗೇಂದ್ರ ಡಿ.ಎಲ್.
ನಿರ್ದೇಶಕರು


ವೈ. ಶ್ರೀನಿವಾಸಗೌಡ
ನಿರ್ದೇಶಕರು


ಜಗದೀಶ ಕಂದಿಕರೆ
ನಿರ್ದೇಶಕರು


ರಾಜೇಶ್ ಟಿ.
ನಿರ್ದೇಶಕರು


ಶಿವಕುಮಾರ ಬಸವರಾಜು ಬಾದವಾಡಗಿ
ನಿರ್ದೇಶಕರು



ಶಿವಾನಂದ ಬಸಪ್ಪ ನ್ಯಾಮಗೌಡ
ನಿರ್ದೇಶಕರು


ಹೆಚ್. ಅಶೋಕ್
ನಿರ್ದೇಶಕರು


ಚಂದ್ರಶೇಖರ್ ಕೋಲ್ಹಾರು
ನಿರ್ದೇಶಕರು


ಪ್ರಜ್ವಲ್ ಕೆ.ಎನ್.
ಮುಖ್ಯಕಾರ್ಯನಿರ್ವಹಣಾಧಿಕಾರಿ


**SAHAKARA VARTHA PATHRIKE KANNADA MONTHLY**
RNI-Reg No.KARKAN/2018/75796
Post Reg No.KA-BGW/1816/2025-27
Posting Date : 1 and 5 Every Month
Posted at : P/C RMS Bhavan, Bangalore PSO,
Blore-26 Published On : 30th of Previous Month
License to post without prepayment
PMG BG/WPP-405/2025-27




ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ
ಬೆಂಗಳೂರು ನಂ. 126 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಜೆಬಿ ಕಾವಲ್,
ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096

**Printed at : Biligiri Printers**
**Chamrajpet, Bengaluru - 18**

## ಸಂಪಾದಕೀಯ



**ಎಸ್. ಚಂದ್ರಶೇಖರ್**
**ಅಧ್ಯಕ್ಷರು**

**ಪ್ಯಾಕ್ಸ್‌ಗಳು ಕೃಷಿ ಹೈನುಗಾರಿಕೆ ಚಟುವಟಿಕೆಗಳಿಗೆ ನೆರವು ನೀಡಿದರೆ ಪಟ್ಟಣ ಬ್ಯಾಂಕುಗಳು ಮತ್ತು ಪತ್ತಿನ ಸಹಕಾರ ಸಂಘಗಳು ನಗರ ಮತ್ತು ಗ್ರಾಮೀಣ ಪ್ರದೇಶಗಳ ಸಹಕಾರಿಗಳಿಗೆ ಆರ್ಥಿಕ ನೆರವು ನೀಡುವಲ್ಲಿ ಮಂಚೂಣಿಯಲ್ಲಿವೆ. ಉಳಿದಂತೆ ಹಲವು ವಲಯಗಳು ಮತ್ತಷ್ಟು ಪರಿಣಾಮಕಾರಿ ಆಗಬೇಕಿದೆ. ಅಂತಾರಾಷ್ಟ್ರೀಯ ಸಹಕಾರ ಮೈತ್ರಿ ನೇತೃತ್ವದಲ್ಲಿ ಪ್ರತಿವರ್ಷದಂತೆ ಈ ವರ್ಷ ಜುಲೈ ಮೊದಲ ಶನಿವಾರ ಅಂತಾರಾಷ್ಟ್ರೀಯ ಸಹಕಾರ ದಿನವನ್ನು ಆಚರಿಸುತ್ತಿದ್ದೇವೆ.**

# ಜುಲೈ 5 : ಅಂತಾರಾಷ್ಟ್ರೀಯ ಸಹಕಾರ ದಿನ

ವಿಶ್ವದ ಸಹಕಾರ ಚಳವಳಿ ಕಾಲ ಕಳೆದಂತೆ ಬಲಿಷ್ಠವಾಗುತ್ತಿದೆ. ಆರ್ಥಿಕವಾಗಿ ಅಬಲರಾದವರ ನೆರವಿಗೆ ಆರಂಭವಾದ ಈ ಚಳವಳಿ ಬಹುತೇಕ ಎಲ್ಲಾ ವಲಯಗಳನ್ನು ಆವರಿಸಿದೆ.

ಭಾರತದ ಸಹಕಾರ ಚಳುವಳಿಯಲ್ಲಿ ವಸತಿ ಸಹಕಾರ ಸಂಘಗಳು ಸಂಖ್ಯೆಯಲ್ಲಿ ಮೊದಲ ಸ್ಥಾನದಲ್ಲಿದ್ದರೆ, ಹಾಲು ಉತ್ಪಾದಕರ ಸಹಕಾರ ಸಂಘಗಳು ಎರಡನೇ ಸ್ಥಾನದಲ್ಲಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮೂರನೇ ಸ್ಥಾನದಲ್ಲಿವೆ.

ಪ್ಯಾಕ್ಸ್‌ಗಳು ಕೃಷಿ ಹೈನುಗಾರಿಕೆ ಚಟುವಟಿಕೆಗಳಿಗೆ ನೆರವು ನೀಡಿದರೆ, ಪಟ್ಟಣ ಬ್ಯಾಂಕುಗಳು ಮತ್ತು ಪತ್ತಿನ ಸಹಕಾರ ಸಂಘಗಳು ನಗರ ಮತ್ತು ಗ್ರಾಮೀಣ ಪ್ರದೇಶಗಳ ಸಹಕಾರಿಗಳಿಗೆ ಆರ್ಥಿಕ ನೆರವು ನೀಡುವಲ್ಲಿ ಮಂಚೂಣಿಯಲ್ಲಿವೆ. ಉಳಿದಂತೆ ಹಲವು ವಲಯಗಳು ಮತ್ತಷ್ಟು ಪರಿಣಾಮಕಾರಿ ಆಗಬೇಕಿದೆ.

ಅಂತಾರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆ ನೇತೃತ್ವದಲ್ಲಿ ಪ್ರತಿವರ್ಷದಂತೆ ಈ ವರ್ಷ ಜುಲೈ ಮೊದಲ ಶನಿವಾರ ಅಂತಾರಾಷ್ಟ್ರೀಯ ಸಹಕಾರ ದಿನವನ್ನು ಆಚರಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ಸಹಕಾರಿಗಳಲ್ಲಿ ತಮ್ಮ ಆತ್ಮಾವಲೋಕನಕ್ಕೆ ಸಮಯ ಒದಗಿಸಲಾಗಿದೆ. ತಮ್ಮ ಸಾಧನೆ, ಯಶಸ್ಸನ್ನು ಸಂಭ್ರಮಿಸುವುದಲ್ಲದೆ ತಮ್ಮ ಮುಂದಿರುವ ಸವಾಲುಗಳನ್ನು ಎದುರಿಸಲು ಸಮಾಜಕ್ಕೆ ನೀಡಬೇಕಾಗಿರುವ ಕೊಡುಗೆ ಬಗ್ಗೆ ಮತ್ತು ಅದರಿಂದ ಜಗತ್ತಿನ ಸುಸ್ಥಿರ ಅಭಿವೃದ್ಧಿ ಹೇಗೆ ಸಾಧ್ಯ ಎಂಬ ಬಗ್ಗೆ ಪರಾಮರ್ಶೆ ಈ ದಿನಮಾನಗಳಲ್ಲಿ ಅಗತ್ಯವೆನಿಸುತ್ತದೆ.

ಅಂತಾರಾಷ್ಟ್ರೀಯ ಸಹಕಾರ ದಿನವೂ ಜಗತ್ತಿನಲ್ಲಿ ಕಾಡುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ಸಂಕಷ್ಟಗಳ ಪರಿಹಾರಕ್ಕೆ ಸೇವಾ ಸಂಸ್ಥೆಗಳಾಗುವ ಜೊತೆಗೆ, ವಿಶ್ವಸಂಸ್ಥೆಯು ಈಗಾಗಲೇ ಘೋಷಿಸಿರುವಂತೆ 2030ಕ್ಕೆ ತಲುಪಬೇಕಾದ 17 ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಗಳಿಗೆ ಸಾಧನವಾಗಬೇಕಾಗಿದೆ.

ಮುಂದಿನ ಪೀಳಿಗೆಗೆ ವಾಸಯೋಗ್ಯ ಗ್ರಹವಾದ ಭೂಮಿ ಉಳಿಯಬೇಕು. ಈ ನಿಟ್ಟಿನಲ್ಲಿ ಎಲ್ಲಾ ರಾಷ್ಟ್ರಗಳು ಸುಸ್ಥಿರ ಗುರಿ ಸಾಧನೆಗೆ ಮತ್ತಷ್ಟು ಕ್ರಿಯಾಶೀಲವಾಗಬೇಕು. ಇದರಲ್ಲಿ ಸಹಕಾರಿಗಳು ಮತ್ತು ಸಹಕಾರ ಸಂಸ್ಥೆಗಳ ಪಾತ್ರ ಮಹತ್ವದ್ದಾಗಿದೆ. ಹೀಗಾದಲ್ಲಿ ಮಾತ್ರ ಅಸಮಾನತೆ, ಹಸಿವು, ಬಡತನ ನಿವಾರಣೆ ಮತ್ತು ಉತ್ತಮ ಪರಿಸರ ನಿರ್ಮಾಣ ಸಾಧ್ಯ

ಎಲ್ಲಾ ಸಹಕಾರಿ ಬಂಧುಗಳಿಗೆ ಅಂತಾರಾಷ್ಟ್ರೀಯಯ ಸಹಕಾರ ದಿನದ ಶುಭಾಶಯಗಳು.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :

**ಶ್ರೀ ಎಸ್. ಚಂದ್ರಶೇಖರ್**

ಕಾರ್ಯನಿರ್ವಾಹಕ ಸಂಪಾದಕರು:

ಸಂಪಾದಕರು :

**ಪ್ರಜ್ವಲ್ ಕೆ.ಎನ್.**

ಮುಖ್ಯಕಾರ್ಯನಿರ್ವಹಣಾಧಿಕಾರಿ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 126, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ ಜೆಬಿ ಕಾವಲ್, ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096

ದೂರವಾಣಿ ಸಂಖ್ಯೆ : 080–23564444 / 23464033 / 23464034

ಇ–ಮೇಲ್ : info@ksccsf.org, ksccsfltd@gmail.com, ವೆಬ್ : www.ksccsf.org

# ಸೂಳೇಭಾವಿ : ರಾಮಯ್ಯ ಸ್ವಾಮಿ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆ (ರಿ)ಯ ನೂತನ ಕಟ್ಟಡ ಲೋಕಾರ್ಪಣೆ



ಶ್ರೀ ಮಧು ಎಸ್. ಬಂಗಾರಪ್ಪ, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಿಂದ ರಾಮಯ್ಯಸ್ವಾಮಿ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆ (ರಿ.) ಸೂಳೇಭಾವಿ ಇದರ ನೂತನ ಕಟ್ಟಡ ಲೋಕಾರ್ಪಣೆಗೊಂಡಿತು. ಸಮಾರಂಭದ ಉದ್ಘಾಟನೆಯನ್ನು ಶ್ರೀ ಎಚ್.ವೈ. ಮೇಟಿ ಶಾಸಕರು ಹಾಗೂ ಅಧ್ಯಕ್ಷರು, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ, ಬಾಗಲಕೋಟೆ, ಜಗದ್ಗುರು ಶ್ರೀಶ್ರೀಶ್ರೀ ದಯಾನಂದಪುರಿ ಮಹಾಸ್ವಾಮಿಗಳು, ಜಗದ್ಗುರು ಶ್ರೀಶ್ರೀಶ್ರೀ 1008 ಬಸವರಾಜ ಪಟ್ಟದಾರ್ಯ ಮಹಾಸ್ವಾಮಿಗಳು, ಡಾ. ಶ್ರೀ ಗುರುಮಹಾಂತ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಸ್. ಚಂದ್ರಶೇಖರ್, ಉಪಾಧ್ಯಕ್ಷರಾದ ಶ್ರೀ ಧರೇಪ್ಪ ಮಹದೇವ ಆಲಗೂರ, ಶ್ರೀ ಮುರುಗೇಶ ಕಡ್ಲಿಮಟ್ಟಿ, ಶ್ರೀ ಪಿಡ್ಡಪ್ಪ ಸಿದ್ದಪ್ಪ ಕುರಿ, ಶ್ರೀ ಟಿ. ರಾಜೇಶ ಇನ್ನಿತರೆ ಗಣ್ಯರುಗಳು ಭಾಗವಹಿಸಿದ್ದರು.

**ಸುಭಾಷಿತ :** ನೀರಿನಿಂದ ಬಟ್ಟೆಗಳು, ಸತ್ಯದಿಂದ ಮನಸ್ಸು, ಅಹಿಂಸೆಯಿಂದ ಆತ್ಮ, ತಿಳಿವಳಿಕೆಯಿಂದ ಬುದ್ಧಿ ನಿರ್ಮಲವಾಗುತ್ತವೆ. – ಗಾಂಧೀಜಿ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು “ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು” ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.

ಐದು ವರ್ಷಗಳ ಚಂದಾ: ರೂ : 1770/-

**ಸೂಚನೆ :**

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.

- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ತುಮಕೂರಿನಲ್ಲಿ ಸಹಕಾರ ಸಚಿವ ಕೆ.ಎನ್ ರಾಜಣ್ಣ ಅವರ ಅಮೃತ ಮಹೋತ್ಸವ ಹಾಗೂ ಅಭಿನಂದನಾ ಗ್ರಂಥ ಲೋಕಾರ್ಪಣೆ

## ಸಹಕಾರ ಆಂದೋಲನ ಜನರ ಸ್ವಾವಲಂಬಿ ಬದುಕಿಗೆ ಪೂರಕ : ಕೆ.ಎನ್. ರಾಜಣ್ಣ

## ಸಹಕಾರ ಕ್ಷೇತ್ರದಿಂದ ಸರ್ವಾಂಗೀಣ ಅಭಿವೃದ್ಧಿ : ಮುಖ್ಯಮಂತ್ರಿ ಸಿದ್ದರಾಮಯ್ಯ




**ತುಮಕೂರು :** "ಸಹಕಾರ ಕ್ಷೇತ್ರದಲ್ಲಿ ಜಾತ್ಯಾತೀತವಾಗಿ ಕೆಲಸ ನಿರ್ವಹಿಸಲು ಸಾಧ್ಯವಿದೆ. ಜಾತಿಗಿಂತ ಸ್ನೇಹ ಸಂಬಂಧ ಮುಖ್ಯ ಎಂಬ ನಿಲುವು ಕೆ.ಎನ್. ರಾಜಣ್ಣ ಅವರದ್ದು" ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಭಿಪ್ರಾಯಪಟ್ಟರು. ಅವರು ಸಚಿವ ರಾಜಣ್ಣ ಅವರ ಜನ್ಮದಿನದ ಅಮೃತ ಮಹೋತ್ಸವ ಹಾಗೂ ಕೆ.ಎನ್.ಆರ್. ಅಭಿನಂದನಾ ಗ್ರಂಥ ಬಿಡುಗಡೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಹಕಾರ ಕ್ಷೇತ್ರವೆಂದರೆ ಅದು ಜನಸೇವೆಯ ವಲಯ, ಎಲ್ಲ ವರ್ಗದ ಬಡವರನ್ನು ಆರ್ಥಿಕವಾಗಿ ಸ್ವಾವಲಂಬಿಯಾಗಿಸುವಲ್ಲಿ ಸಹಕಾರ ಕ್ಷೇತ್ರ ಬಹಳ ಪ್ರಮುಖ ಪಾತ್ರ ನಿರ್ವಹಿಸುತ್ತಿದೆ. ಸಹಕಾರ ಕ್ಷೇತ್ರ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ. ಇಂಥ ಕ್ಷೇತ್ರದಲ್ಲಿ 4 ದಶಕಗಳಿಂದ ಬದ್ಧತೆಯಿಂದ ತೊಡಗಿಸಿಕೊಂಡಿರುವ ರಾಜಣ್ಣ ಅವರು ಜ್ಯಾತ್ಯಾತೀತವಾಗಿ ಜನಸೇವೆ ಮಾಡುತಿದ್ದಾರೆ. ಈ ತತ್ವವನ್ನು ಎಲ್ಲಾ ಸಹಕಾರಿಗಳು ಅನುಸರಿಸಬೇಕು. ಎಲ್ಲರನ್ನು ಸಮಾನವಾಗಿ ನೋಡುವ ರಾಜಕೀಯ ನೇತಾರ ರಾಜಣ್ಣ. ಅಸಮಾನತೆ ತೊಲಗಿಸಿ ಎಲ್ಲರೂ ಮುಖ್ಯವಾಹಿನಿಗೆ ಬರುವಂತೆ ಮಾಡುವುದೇ ಅವರ ಗುರಿಯಾಗಿದೆ. ಇಂತಹ ಗುಣಗಳಿರುವ ಕಾರಣದಿಂದಲೇ ನನಗೆ ರಾಜಣ್ಣ ಇಷ್ಟವಾಗಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮೆಚ್ಚುಗೆ ವ್ಯಕ್ತಪಡಿಸಿದರು.

ಆಡಳಿತ ನಡೆಸುವವರಲ್ಲಿ ಮಾನವೀಯ ಗುಣಗಳು ಇದ್ದಾಗ ಮಾತ್ರ ಸಮಸಮಾಜ ನಿರ್ಮಾಣವಾಗಲು ಸಾಧ್ಯ. ಜಾತಿ ಮುಖ್ಯ ಅಲ್ಲ, ಸ್ನೇಹ, ಸಂಬಂಧ ಮುಖ್ಯ. ನಂಬಿದ ಸ್ನೇಹಿತರ ಉನ್ನತಿಗೆ ಶ್ರಮಿಸುವ ದೊಡ್ಡ ಗುಣ ರಾಜಣ್ಣ ಅವರಲ್ಲಿದೆ ಎಂದರು. ನನ್ನ ಸರ್ಕಾರದ ಮೊದಲ ಅವಧಿಯಲ್ಲಿ ಘೋಷಿಸಿದ 'ಅನ್ನಭಾಗ್ಯ' ಯೋಜನೆಗೆ ಹೆಸರು ಸೂಚಿಸಿದ್ದು ಬರಗೂರು ರಾಮಚಂದ್ರಪ್ಪ ಅವರು, ಶೂ ಭಾಗ್ಯ, ರೈತರ ಸಾಲಮನ್ನಾ ಯೋಜನೆಗೆ ಸಲಹೆ ನೀಡಿದ್ದು ಕೆ.ಎನ್.ರಾಜಣ್ಣ ಅವರು ಎಂದರು.

ಡಾ. ಬಿ.ಆರ್. ಅಂಬೇಡ್ಕರ್ ಅವರ ಸ್ವಾತಂತ್ರ್ಯ ಸಾರ್ಥಕವಾಗಬೇಕಾದರೆ ಪ್ರತಿಯೊಬ್ಬರು ಸ್ವಾವಲಂಬಿಗಳಾಗಬೇಕು. ಆದ್ದರಿಂದ ಪ್ರತಿಯೊಬ್ಬ ನಾಗರಿಕನು ಸಂವಿಧಾನ ಓದಿ ಅರಿತು ಮುನ್ನಡೆಯಿರಿ ಎಂದು ಮುಖ್ಯಮಂತ್ರಿಗಳು ಸಲಹೆ ಮಾಡಿದರು.

ನಾನು ಪಡೆದ ಶಿಕ್ಷಣಕ್ಕೆ ಡಾ. ಬಿ.ಆರ್. ಅಂಬೇಡ್ಕರ್ ನೀಡಿದ ಸಂವಿಧಾನವೇ ಕಾರಣ. ಹುಟ್ಟಿನಿಂದ ಯಾರೂ ಮೇಲು–ಕೀಳಲ್ಲ. ಅವಕಾಶ ಸಿಕ್ಕಬೇಕಷ್ಟೇ, ನನಗೆ ಮುಖ್ಯಮಂತ್ರಿಯಾಗುವ ಅವಕಾಶ ಸಿಕ್ಕಿದೆ. ಇದಕ್ಕಾಗಿ ಸದಾ ರಾಜಪ್ಪ ಮೇಷ್ಟ್ರನ್ನ ನೆನಪು ಮಾಡಿಕೊಳ್ಳುತ್ತೇನೆ ಎಂದರು.

ಉಪಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ಅವರು ಮಾತನಾಡಿ, ರಾಜಣ್ಣ ಒಬ್ಬ ಸ್ವಾಭಿಮಾನಿ ರಾಜಕಾರಣಿ, ಸಮಸಮಾಜ ನಿರ್ಮಾಣದ

ಕನಸು ಹೊತ್ತ ಸಹಕಾರಿ. ಅವರು ನೇರ ನಡೆ ನುಡಿಗೆ ಹೆಸರಾದವರು. ಸದಾ ರೈತರ ಬಗ್ಗೆ ಕಾಳಜಿ ಹೊಂದಿದವರು. ನಾನು ಸಹಕಾರ ಮಂತ್ರಿಯಾಗಿದ್ದಾಗ ರಾಜಣ್ಣ ಅವರನ್ನು ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರನ್ನಾಗಿ ಮಾಡಿದೆ ಎಂದು ಅವರು ಸ್ಮರಿಸಿದರು. ಅಂತಾರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯ ಸಮ್ಮೇಳನ ಸೇರಿದಂತೆ ಹಲವು ಪ್ರವಾಸಗಳನ್ನು ಜೊತೆ ಜೊತೆಗೆ ಕೈಗೊಂಡಿದ್ದೇವೆ. ಈಗಲೂ ಜತೆಗೆ ಕೆಲಸ ನಿರ್ವಹಿಸುತ್ತಿದ್ದು, ರೈತರ ಪರವಾಗಿ ನಾವು ಕೆಲಸ ಮಾಡಲು ಸಿದ್ಧರಿದ್ದೇವೆ. ಆದ್ದರಿಂದಲೇ ಎತ್ತಿನಹೊಳೆ ಯೋಜನೆ ಪೂರ್ಣಗೊಳಿಸಲು ಶ್ರಮಿಸುತಿದ್ದೇವೆ ಇದರಿಂದಾಗಿ ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಕುಡಿಯುವ ನೀರು ಸಿಗಲಿದೆ ಎಂದರು.

ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಆಶಯ ಭಾಷಣ ಮಾಡುತ್ತಾ, ರಾಜಣ್ಣ ಅವರದ್ದು, ಎಲ್ಲರಲ್ಲೂ ಒಬ್ಬರಾಗಿ ಬದುಕುವ ಗುಣ, ಏಕಶಿಲಾ ಬೆಟ್ಟದಂತೆ ಅವರ ವ್ಯಕ್ತಿತ್ವವು ಗಟ್ಟಿ, ಜಾತ್ಯಾತೀತ ನಾಯಕರಾಗಿ, ಅಬಲವರ್ಗದವರ ಧ್ವನಿಯಾಗಿ ಅವರು ಕೆಲಸ ನಿರ್ವಹಿಸುತ್ತಾ ಬಂದಿದ್ದಾರೆ. ದೇವರಾಜು ಅರಸು ಅವರ ಪ್ರೇರಣೆ ರಾಜಣ್ಣ ಅವರ ಕೆಲಸದಲ್ಲಿ ನಾವು ಕಾಣಬಹುದಾಗಿದೆ. ಅವರ ಅಮೃತ ಮಹೋತ್ಸವದ ಈ ಸುಸಂದರ್ಭದಲ್ಲಿ ನಾನೂ ತುಮಕೂರು ಜಿಲ್ಲೆಯ ಅಸ್ಮಿತೆಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡ್ಯೊಯಲು ಇಲ್ಲಿ ಉಪಸ್ಥಿತರಿರುವ ಸಚಿವರುಗಳಲ್ಲಿ ಮನವಿ ಮಾಡುತ್ತೇನೆ ಎಂದರು.

ಕಲ್ಪತರು ನಾಡು ತುಮಕೂರು ತನ್ನದೇಯಾದ ಐತಿಹಾಸಿಕ ಪರಂಪರೆಯನ್ನು ಹೊಂದಿದೆ. ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ಮುಂಚೂಣಿಯಲ್ಲಿರುವ ಈ ಜಿಲ್ಲೆಯಲ್ಲಿ ಮತ್ತಷ್ಟು ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡುವ ಮೂಲಕ ಜಿಲ್ಲೆಯ ಯುವಕರಿಗೆ ಉದ್ಯೋಗ ದೊರಕುವಂತೆ ಮಾಡಲು ಅವರು ಈ ಸಂದರ್ಭದಲ್ಲಿ ಸಲಹೆ ಮಾಡಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಸಹಕಾರ ಸಚಿವರಾದ ಕೆ.ಎನ್. ರಾಜಣ್ಣ ಅವರು ಅಬಲವರ್ಗದವರ ಸ್ವಾವಲಂಬನೆಗಾಗಿಯೇ ಹಲವಾರು ಹೊರಾಟದಲ್ಲಿ ಭಾಗವಹಿಸುತ್ತಾ ಬೆಳೆದ ನಾನು. ಎಲ್ಲಾ ಸಮುದಾಯಗಳ ಬಡವರ ಅಭಿವೃದ್ಧಿಗಾಗಿಯೇ ಶ್ರಮಿಸುತ್ತಿರುವೆ.




ಇದಕ್ಕೆ ನಮ್ಮ ಮುಖ್ಯಮಂತ್ರಿಯರ ಸಹಕಾರವಿದೆ. ನಾನು ಸಹ ಮಧ್ಯಮವರ್ಗದಿಂದಲೇ ಬಂದವನು, ತುಮಕೂರು ಸಿದ್ಧಗಂಗಾ ಮಠದಲ್ಲಿ ವಿದ್ಯಾಭ್ಯಾಸ ಮಾಡಿದ ನನಗೆ ಡಾ. ಶಿವಕುಮಾರ ಸ್ವಾಮಿಗಳು ಹೇಳಿಕೊಟ್ಟ ಇಂಗ್ಲೀಷ್ ಪಾಠ ನನ್ನನ್ನು ಈ ಮಟ್ಟಕ್ಕೆ ಬೆಳೆಸಿದೆ, ನನ್ನ ಸಾಧನೆಯಲ್ಲಿ ಮಠದ ಕೊಡುಗೆ ಅಪಾರವಾದದು. ಹಾಗೇಯೇ ನನ್ನ ಬೆಳವಣಿಗೆಯಲ್ಲಿ ನಮ್ಮ ಸೋದರ ಮಾವನವರ ಪಾತ್ರವು ಅತ್ಯಂತ ಪ್ರಮುಖವಾಗಿದೆ ಎಂದ ಅವರು, ನನ್ನನು ಸೋದರ ಮಾವ ಮಗನಂತೆ ಸಾಕಿ ಸಲುಹಿದರು ಎಂದು ಸ್ಮರಿಸಿದರು.

ಕೃಷಿ ಕುಟುಂಬದಿಂದ ಬಂದ ನನಗೆ ರೈತರ ಬವಣೆ ಗೊತ್ತು. ರೈತನ ಉತ್ಪಾದನೆಗೆ ಉತ್ತಮ ಬೆಲೆ ಸಿಗಬೇಕು. ಆದ್ದರಿಂದಲೇ ನಾನು ಸಹಕಾರ ರಂಗದಿಂದ ರೈತರಿಗೆ ಹೆಚ್ಚಿನ ಸಾಲ ಸೌಲಭ್ಯ ನೀಡಲು ಒತ್ತಾಯಿಸುತ್ತೇನೆ. ಸಹಕಾರಿ ಆಂದೋಲನದಿಂದ ಜನರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಸಾಧ್ಯವಿದೆ ಎಂದರು.

ಗೃಹ ಸಚಿವ ಡಾ. ಜಿ. ಪರಮೇಶ್ವರ್ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದು, ಅವರು ಮಾತನಾಡಿ, ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ಅತಿದೊಡ್ಡ ಕ್ರಾಂತಿ ಮಾಡಿದ ರಾಜಣ್ಣ ಅವರು ಒಬ್ಬ ಸಹೃದಯಿ. ಅವರು ಅಬಲ ವರ್ಗದವರ ಪರವಾಗಿ ಸದಾ ನಿಂತಿದ್ದಾರೆ. ರಾಜಕೀಯ ಕ್ಷೇತ್ರಕ್ಕೂ ತಮ್ಮದೇಯಾದ ಕೊಡುಗೆ ನೀಡಿದ್ದಾರೆ. ಸಹಕಾರ ವಲಯದ ಸಮಗ್ರ ಅಭಿವೃದ್ಧಿಯಲ್ಲಿ ಅವರ ಕೊಡುಗೆ ಅಭಿನಂದನೀಯವಾದುದು. ಅವರ ಈ ಶ್ರೇಯಸ್ಸಿನ ಹಿಂದೆ ಅವರ ಕುಟುಂಬವರ್ಗದವರ ಪರಿಶ್ರಮವಿದೆ. ಉತ್ತಮ ಸ್ನೇಹಿತನಾಗಿರುವ ರಾಜಣ್ಣ ಅವರ ಕುರಿತು ಅಭಿನಂದನಾ ಗ್ರಂಥ ಹೊರತಂದಿರುವುದು ಶ್ಲಾಘನೀಯವಾದುದು. ಅವರ ಸಹಕಾರ ಸೇವೆ ಹೀಗೆ ಮುಂದುವರೆಯಲಿ ಅವರಿಗೆ ದೇವರು ಆರೋಗ್ಯ, ಆಯಸ್ಸು ಕರುಣಿಸಲಿ ಎಂದು ಶುಭಕೋರಿದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿಯವರು ಮಾತನಾಡಿ, ಸಹಕಾರ ಸಚಿವ ರಾಜಣ್ಣ ಅವರು ಜನನಾಯಕರಾಗಿದ್ದಾರೆ. ಅವರೊಬ್ಬ ಪ್ರಾಮಾಣಿಕ ವ್ಯಕ್ತಿ, ಯಾವುದೇ ಕೆಲಸವಾದರು ಬಹಳ ಅಚ್ಚುಕಟ್ಟಾಗಿ ನಿಬಾಯಿಸುತ್ತಾರೆ. ನೇರ ನಡೆ, ನುಡಿಗೆ ಹೆಸರಾದ ರಾಜಣ್ಣ ಅವರು ಸಾರ್ವಜನಿಕರ ಕಷ್ಟಗಳಿಗೆ ಬಹಳ ಬೇಗ ಸ್ಪಂದಿಸುತ್ತಾರೆ. ಅವರೊಂದಿಗಿನ ನನ್ನ ಸ್ನೇಹ 40 ವರ್ಷಗಳದ್ದು, ಪಕ್ಷರಾಜಕೀಯ, ಜಾತಿ ರಾಜಕೀಯ ಅವರಲ್ಲಿ ಇಲ್ಲ. ಅವರ ಜೀವನ ಮತ್ತಷ್ಟು ಸುಖಮಯವಾಗಿರಲಿ ಎಂದು ಆಶಿಸುತ್ತೇನೆ ಎಂದು ಶುಭಕೋರಿದರು.

ಮಾಜಿ ಸಚಿವ ಮುರುಗೇಶ್ ನಿರಾಣಿ ಅವರು ಮಾತನಾಡಿ, ಸಹಕಾರ ಕ್ಷೇತ್ರದಲ್ಲಿ ವಿಶೇಷ ಸ್ಥಾನ ಹೊಂದಿರುವ ಕೆ.ಎನ್. ರಾಜಣ್ಣ ಅವರು ಕರ್ನಾಟಕದ ಸಹಕಾರ ಚಳವಳಿಯ ಮಾರ್ಗದರ್ಶಕರಾಗಿದ್ದಾರೆ. ಅವರು ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರಾಗಿದ್ದಾಗ ಸಹಕಾರ ಸಕ್ಕರೆ ಕಾರ್ಖಾನೆಗಳಿಗೆ ನೀಡಿದ ನೆರವಿನಿಂದಾಗಿ ಇಂದು ನಮ್ಮ ಸಕ್ಕರೆ ಕಾರ್ಖಾನೆಯೂ ಅತಿ ಹೆಚ್ಚು ಸಕ್ಕರೆ ಉತ್ಪಾದನೆ ಮಾಡುತ್ತಿದೆ.

ಪಕ್ಷಾತೀತವಾಗಿ, ಜಾತ್ಯಾತೀತವಾಗಿ ಅವರು ಸಹಕಾರಿ ರಂಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಮುಂದಿನ ಜೀವನ ಸಂತೋಷದಿಂದ ಕೂಡಿರಲಿ ಎಂದು ಅಭಿನಂದಿಸಿದರು.

ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಸಚಿವರಾದ ಕೆ.ಹೆಚ್ ಮುನಿಯಪ್ಪ




ಅವರು ಮಾತನಾಡಿ, ರೈತ ಕುಟುಂಬದಿಂದ ಬಂದ ರಾಜಣ್ಣ ಅವರು ರೈತರ ಕಷ್ಟ ಸುಖ ಅರಿತವರು. 4 ದಶಕಗಳಿಗೂ ಹೆಚ್ಚು ಕಾಲದಿಂದ ಸಹಕಾರಿ ವಲಯದಲ್ಲಿ ಕ್ರಿಯಾಶೀಲರಾಗಿರುವ ಅವರು ಅತ್ಯುತ್ತಮ ಜನನಾಯಕ, ರೈತರ ಸಾಲಮನ್ನಾ ಹೋರಾಟಗಾರರು. ಅವರು ಅಭಿನಂದನಾ ಗ್ರಂಥ ಅವರ ಜೀವನ ಮೌಲ್ಯಗಳ ಕನ್ನಡಿಯಾಗಿ ಮೂಡಿಬಂದಿದೆ. ಅವರಿಗೆ ಶುಭವಾಗಲಿ ಎಂದು ಆಶಿಸಿದರು.

ಸಾರಿಗೆ ಮತ್ತು ಮುಜರಾಯಿ ಸಚಿವರಾದ ರಾಮಲಿಂಗ ರೆಡ್ಡಿ ಅವರು ಮಾತನಾಡಿ, ಜಿಲ್ಲಾ ಕೇಂದ್ರ ಬ್ಯಾಂಕ್, ಅಪೆಕ್ಸ್ ಬ್ಯಾಂಕ್ ಹೀಗೆ ಸಹಕಾರ ರಂಗದಲ್ಲಿ ಪ್ರಾಥಮಿಕ ಹಂತದಿಂದ ರಾಷ್ಟ್ರಮಟ್ಟದವರೆಗೂ ತಮ್ಮನ್ನು ತೊಡಗಿಸಿಕೊಂಡು ಉತ್ತಮ ಸೇವೆ ನೀಡಿದ್ದಾರೆ. ಅವರ ಕೆಲಸ ಕಾರ್ಯಗಳ ಪ್ರತಿಫಲ ಇಂದಿನ ಜನಸ್ತೋಮಕ್ಕೆ ಕಾರಣವಾಗಿದೆ. ಜನಪ್ರಿಯ ರಾಜಕಾರಣಿಯೂ ಆಗಿರುವ ಅವರಿಗೆ ದೇವರು ಉತ್ತಮ ಆರೋಗ್ಯ, ಆಯಸ್ಸು ನೀಡಲಿ ಎಂದು ದೇವರಲ್ಲಿ ಪ್ರಾರ್ಥಿಸುವೆ ಎಂದರು.

ಲೋಕೋಪಯೋಗಿ ಸಚಿವರಾದ ಸತೀಶ್ ಜಾರಕಿಹೊಳಿ ಅವರು ಮಾತನಾಡಿ, ಸಹಕಾರಿಯಾಗಿ, ಶಾಸಕರಾಗಿ, ಹಲವಾರು ಸಹಕಾರ ಸಂಘಗಳಿಗೆ ಮಾರ್ಗದರ್ಶಕರಾಗಿ ಉತ್ತಮ ಕೆಲಸ ನಿರ್ವಹಿಸಿದ್ದಾರೆ. ತುಮಕೂರು ಜಿಲ್ಲೆಯ ಅಭಿವೃದ್ಧಿಯಲ್ಲಿ ಅವರ ಸೇವೆ ಶ್ಲಾಘನೀಯ. ಅವರ ಜನಪರ ಸೇವೆ ಹೀಗೆ ಮುಂದುವರೆಯಲ್ಲಿ ಎಂದು ಶುಭ ಹಾರೈಸಿದರು. ಕೃಷಿ ಸಚಿವ ಸಿ.ಎನ್. ಚಲುವರಾಯಸ್ವಾಮಿ ಅವರು ಮಾತನಾಡಿ, ಸುದೀರ್ಘ ರಾಜಕಾರಣದಲ್ಲಿ ರಾಜಣ್ಣ ಅವರು ತೃಪ್ತಿ ಹೊಂದಿದ್ದಾರೆ. ಕೃಷಿ ರಂಗಕ್ಕೆ ಅವರು ಸದಾ ಮಾರ್ಗದರ್ಶಕರು. ಸಮಾರಂಭವನ್ನು ಯಶಸ್ವಿಯಾಗಿ ಆಯೋಜಿಸಿರುವುದು ಅವರ ಪ್ರೀತಿ, ವಿಶ್ವಾಸಕ್ಕೆ ಪಾತ್ರವಾಗಿದೆ ಎಂದರು.

ಆಂಧ್ರ ಪ್ರದೇಶದ ಮಾಜಿ ಸಚಿವರಾದ ರಘುವೀರ ರೆಡ್ಡಿ ಅವರು ಮಾತನಾಡಿ, ರಾಜಣ್ಣ ಅವರು ಸದಾ ಹಸನ್ಮುಖಿಗಳು, ವಿದ್ಯಾರ್ಥಿ ಹಂತದಿಂದಲೇ ನಾಯಕರಾಗಿ ಗುರುತಿಸಿಕೊಂಡ ಅವರು ಜನನಾಯಕರಾಗಿ, ಸಹಕಾರಿ ಮುಖಂಡರಾಗಿ, ಸಚಿವರಾಗಿ ತುಮಕೂರು ಜಿಲ್ಲೆ ಸೇರಿದಂತೆ ಕರ್ನಾಟಕದಾದ್ಯಂತ ಸೇವೆ ಸಲ್ಲಿಸಿದ್ದಾರೆ. ಸಹಕಾರ ಸಚಿವರಾಗುವ ಅವರ ಆಸೆ ಪೂರ್ಣಗೊಂಡಿದೆ. ಮಧುಗಿರಿಯ ಸಂಪೂರ್ಣ ಅಭಿವೃದ್ಧಿಗೆ ಅವರ ಕೊಡುಗೆ ಅಪಾರ. ಅವರ ಸೇವೆ ನಿರಂತರವಾಗಿ ಸಾರ್ವಜನಿಕರಿಗೆ ಲಭಿಸಲಿ ಎಂದು ಅವರ ಅಮೃತ ಮಹೋತ್ಸವಕ್ಕೆ ಶುಭ ಕೋರಿದರು.

ಶಾಸಕರಾದ ಸುರೇಶ್‌ಗೌಡ ಅವರು ಮಾತನಾಡಿ, ರಾಜಣ್ಣ ಅವರ ಸಹಕಾರ ಕ್ಷೇತ್ರದ ಸಾಧನೆ ಮಾದರಿಯಾದುದು. ಸಹಕಾರ ಸಚಿವರಾಗಿ, ಸಹಕಾರಿ ಮುಖಂಡರಾಗಿ ಅವರು ಕರ್ನಾಟಕದ ಸಹಕಾರ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಅಪಾರ. ದಿಟ್ಟ ನಾಯಕತ್ವ ಗುಣ ಹೊಂದಿರುವ ಅವರು ಇಂದು ನಮ್ಮೆಲ್ಲರ ಮಾರ್ಗದರ್ಶಕರಾಗಿದ್ದಾರೆ ಎಂದು ಅಭಿನಂದನೆ ವ್ಯಕ್ತಪಡಿಸಿದರು.

ಶಾಸಕರಾದ ಎಂ.ಆರ್. ಸೀತಾರಾಮ್ ಅವರು ಮಾತನಾಡಿ, ಜನಸೇವೆಯಲ್ಲಿ ಸದಾ ನಿರತರಾಗಿರುವ ರಾಜಣ್ಣ ಅವರು ಹಂತಹಂತವಾಗಿ ಬೆಳೆದವರು. ಅಬಲವರ್ಗದವರ ಸ್ವಾವಲಂಬಿ ಬದುಕಿಗೆ ಸದಾ ಸಿದ್ಧವಿರುವ ಅವರು ಜನಾನುರಾಗಿಯಾಗಿ ಗುರುತಿಸಿಕೊಂಡಿದ್ದಾರೆ. ಅವರ ಸೇವೆ ಸಮಾಜಕ್ಕೆ ನಿರಂತರವಾಗಿರಲಿ ಎಂದು ಶುಭಕೋರಿದರು. ಕಾರ್ಯಕ್ರಮದಲ್ಲಿ ಕೆ.ಎನ್.ಆರ್. ಅಭಿನಂದನಾ ಗ್ರಂಥ ಹಾಗೂ ಸಹಕಾರ ವಾರಪತ್ರಿಕೆಯ ವಿಶೇಷ ಸಂಚಿಕೆಯನ್ನು ಮುಖ್ಯಮಂತ್ರಿಗಳು ಬಿಡುಗಡೆಗೊಳಿಸಿದರು.

ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಸಚಿವರು, ಶಾಸಕರುಗಳು, ಸಹಕಾರಿ ಮುಖಂಡರುಗಳು ಸಹಕಾರ ಸಚಿವ ಕೆ.ಎನ್. ರಾಜಣ್ಣ ಮತ್ತು ಎಸ್.ಆರ್. ಶಾಂತಲ ದಂಪತಿಗಳನ್ನು ಆತ್ಮೀಯವಾಗಿ ಅಭಿನಂದಿಸಿ ಗೌರವಿಸಿ, ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಸಚಿವ ಕೆ.ಎನ್ ರಾಜಣ್ಣ ಅವರ ಕುಟುಂಬದ ಸದಸ್ಯರು, ಶಾಸಕರುಗಳಾದ ಜಿ.ಟಿ. ದೇವೇಗೌಡ, ಹೆಚ್.ವಿ. ವೆಂಕಟೇಶ್, ಜಿ.ಬಿ. ಜ್ಯೋತಿ ಗಣೇಶ್, ಆರ್. ರಾಜೇಂದ್ರ, ಸಂಸದರಾದ ಶ್ರೇಯಸ್ ಪಟೇಲ್, ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ, ಮಾಜಿ ಸಂಸದರಾದ ಎಸ್.ಪಿ. ಮುದ್ದುಹನುಮೇಗೌಡ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಅಧ್ಯಕ್ಷರಾದ ಎಂ.ಎನ್. ರಾಜೇಂದ್ರ ಕುಮಾರ್, ಮಾಜಿ ಶಾಸಕರಾದ ಶಫೀ ಅಹಮದ್, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರಾದ ಎನ್. ಗಂಗಣ್ಣ, ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮೊಹಮದ್ ಮೊಹಸಿನ್, ಸಹಕಾರ ಸಂಘಗಳ ನಿಬಂಧಕರಾದ ಟಿ.ಎಚ್.ಎಂ. ಕುಮಾರ್, ಹಿರಿಯ ಅಧಿಕಾರಿಗಳಾದ ಸಿ.ಎನ್. ದೇವರಾಜು, ಕೆ.ಎಸ್. ನವೀನ್, ಜಂಟಿ ನಿಬಂಧಕರುಗಳಾದ ಡಾ. ಜಿ. ಉಮೇಶ್, ಡಾ. ಸುರೇಶ್‌ಗೌಡ, ವಿಶ್ವನಾಥ್ ಮಲ್ಕೊಡ್, ಪ್ರಸಾದ್ ರೆಡ್ಡಿ ಅವರು ಸೇರಿದಂತೆ ಇಲಾಖೆಯ ಅಧಿಕಾರಿಗಳು, ಸಹಕಾರ ಬಯಲುಸೀಮೆ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷರಾದ ಕೆ.ಎ. ದೇವರಾಜು, ತುಮಕೂರು ಡಿಸಿಸಿ ಬ್ಯಾಂಕಿನ ಉಪಾಧ್ಯಕ್ಷರಾದ ಜಿ.ಜೆ. ರಾಜಣ್ಣ, ಕೆ.ಎನ್.ಆರ್. ಗೌರವ ಗ್ರಂಥ ಸಂಪಾದನಾ ಸಮಿತಿಯ ಅಧ್ಯಕ್ಷರಾದ ಎಸ್. ನಾಗಣ್ಣ, ಸಂಪಾದಕರಾದ ಟಿ. ಮುರಳಿ ಕೃಷ್ಣಪ್ಪ, ಸಹ ಸಂಪಾದಕರುಗಳಾದ ಬಾ.ಹ. ರಮಾಕುಮಾರಿ, ಬಿ.ಸಿ.ಶೈಲಾ ನಾಗರಾಜು, ಎಂ.ಹೆಚ್. ನಾಗರಾಜು, ಸಂಚಾಲಕರಾದ ಜಂಗಮಪ್ಪ, ಟಿ.ಪಿ. ಮಂಜುನಾಥ್, ಪಿ.ಆರ್ ನಾರಾಯಣಗೌಡ, ಜಿ. ಲಕ್ಷ್ಮಿನಾರಾಯಣ್, ಗುರುಮೂರ್ತಿ ಇತರರು ಉಪಸ್ಥಿತರಿದ್ದರು.

# ಎಲ್ಲಾ ಜಲಾಶಯಗಳೂ ತುಂಬಿವೆ; ಎಲ್ಲಾ ನಾಲೆಗಳಿಗೂ ತಕ್ಷಣದಿಂದ ನೀರು ಹರಿಸಿ : ಮುಖ್ಯಮಂತ್ರಿ ಸಿದ್ದರಾಮಯ್ಯ



**ಶ್ರೀರಂಗಪಟ್ಟಣ** : ನೀರಾವರಿಗೆ ಸರ್ಕಾರ 25 ಸಾವಿರ ಕೋಟಿ ರೂ. ಕೊಟ್ಟಿದೆ. ಬೇರೆ ಯಾವ ಸರ್ಕಾರವಾದರೂ ಈ ಮಟ್ಟದ ಅನುದಾನ ಕೊಟ್ಟಿರಲಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದ್ದಾರೆ.

ಕೃಷಿ ಪ್ರಗತಿಗಾಗಿ ವರ್ಷಕ್ಕೆ 19000 ಸಾವಿರ ಕೋಟಿ ರೂ. ಪಂಪ್ ಸೆಟ್ ಸಬ್ಸಿಡಿಯನ್ನು ರೈತರಿಗೆ ಕೊಟ್ಟಿದ್ದೇವೆ. 92 ವರ್ಷಗಳ ಬಳಿಕ ಜೂನ್ ತಿಂಗಳಲ್ಲೇ ಭರ್ತಿ ಆಗಿರುವ ಕೆ.ಆರ್.ಎಸ್.ನಲ್ಲಿ ಸ್ಮಾರಕ ನಿರ್ಮಿಸಿ ಎಂದು ಕಾವೇರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಮುಖ್ಯಮಂತ್ರಿಗಳು ಸೂಚನೆ ನೀಡಿದರು.

ಕೃಷ್ಣರಾಜಸಾಗರದ ಒಟ್ಟು 124 ಅಡಿ ಸಾಮರ್ಥ್ಯದಲ್ಲಿ 120.90 ಅಡಿ ಭರ್ತಿ ಆಗಿದೆ. ಅಣೆಕಟ್ಟೆಗೆ 49 TMC ನೀರಿನ ಸಾಮರ್ಥ್ಯವಿದ್ದು, ಇಲ್ಲಿಯವರೆವಿಗೆ 76 ಬಾರಿ ಭರ್ತಿಯಾಗಿದೆ. ನಾವು ಈ ಬಾರಿ ಕಾವೇರಿ ಅಭಿವೃದ್ಧಿ ನಿಗಮಕ್ಕೆ 3000 ಕೋಟಿ ರೂ. ಹಣ ಕೊಟ್ಟಿದ್ದೇವೆ. ತಾಯಿ ಕಾವೇರಿಗೆ ಪೂಜೆ ಮಾಡಿ ನಾಡಿನ ಮಳೆ, ಬೆಳೆ ಚೆನ್ನಾಗಿ ಆಗಲಿ ಎಂದು ಪ್ರಾರ್ಥಿಸಿದ್ದೇನೆ ಎಂದರು. ಕಾವೇರಿ ತಾಯಿ, ಚಾಮುಂಡೇಶ್ವರಿ ಕೃಪಾಕಟಾಕ್ಷದಿಂದ ರಾಜ್ಯ ಸುಭಿಕ್ಷವಾಗಿದೆ. ಎಲ್ಲಾ ಜಲಾಶಯಗಳೂ ತುಂಬಿವೆ. ಎಲ್ಲಾ ನಾಲೆಗಳಿಗೂ ತಕ್ಷಣದಿಂದ ನೀರು ಹರಿಸಲು ವೇದಿಕೆಯಿಂದಲೇ ಆದೇಶ ನೀಡಿದರು.



ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯರವರ ಸಮ್ಮುಖದಲ್ಲಿ ಸಹಕಾರ ಸಚಿವರಾದ ಕೆ.ಎನ್.ರಾಜಣ್ಣರವರ 75ನೇ ಹುಟ್ಟುಹಬ್ಬದ ಪ್ರಯುಕ್ತ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷರಾದ ಎಸ್.ಚಂದ್ರಶೇಖರ್ ರವರು ಬೆಳ್ಳಿ ಗದೆ ನೀಡುವ ಮೂಲಕ ಅವರಿಗೆ ಶುಭಾಶಯ ಕೋರಿದರು. ಮೈಸೂರಿನ ಚಾಮರಾಜ ಕ್ಷೇತ್ರದ ಶಾಸಕ ಹರೀಶ್‌ಗೌಡರವರು ಉಪಸ್ಥಿತರಿದ್ದರು.

# ಬೆಂಗಳೂರು ಸಹಕಾರ ಹಾಲು ಒಕ್ಕೂಟದ ಅಧ್ಯಕ್ಷರಾಗಿ ಡಿ.ಕೆ. ಸುರೇಶ್ ಆಯ್ಕೆ

**ಬೆಂಗಳೂರು** : ಬೆಂಗಳೂರು ನಗರ, ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳ ವ್ಯಾಪ್ತಿಯ ಬೆಂಗಳೂರು ಸಹಕಾರ ಹಾಲು ಒಕ್ಕೂಟದ ಅಧ್ಯಕ್ಷರಾಗಿ ಡಿ.ಕೆ. ಸುರೇಶ್ ಅವರು ಆಯ್ಕೆಯಾಗಿದ್ದಾರೆ.

ಹಾಲು ಒಕ್ಕೂಟದ ಉಪಾಧ್ಯಕ್ಷರಾಗಿ ರಾಜಣ್ಣ, ನಿರ್ದೇಶಕರುಗಳಾಗಿ ಚಲುವಯ್ಯ ಉ। ಪಿ. ನಾಗರಾಜು, ಆರ್.ಕೆ. ರಮೇಶ್, ಎಂ. ಮಂಜುನಾಥ, ಎಸ್. ಲಿಂಗೇಶ್‌ಕುಮಾರ್, ಆನಂದಕುಮಾರ್, ಹೆಚ್. ಎಸ್. ಹರೀಶ್ ಕುಮಾರ್, ಕೆ.ಎಂ. ಕೃಷ್ಣಯ್ಯ, ಅಶೋಕ ಹೆಚ್. ಎನ್., ಬೈರೇಗೌಡ, ಬಿ.ವಿ. ಸತೀಶ್‌ಗೌಡ, ಕೆ.ಆರ್. ಸತೀಶ್, ಎಸ್.ಪಿ. ಮುನಿರಾಜು ಅವರುಗಳು ಚುನಾಯಿತರಾಗಿದ್ದಾರೆ.

ಸರ್ಕಾರದ ನಾಮನಿರ್ದೇಶಿತ ನಿರ್ದೇಶಕರಾಗಿ ಎ. ಮಂಜುನಾಥ್ ನೇಮಕಗೊಂಡಿದ್ದಾರೆ. ಬಮುಲ್ ಆಡಳಿತ ಮಂಡಳಿಯಲ್ಲಿ ಸಹಕಾರ ಸಂಘಗಳ ಪ್ರತಿನಿಧಿಯಾಗಿ ಬೆಂಗಳೂರು ಪ್ರಾಂತ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಡಾ. ಉಮೇಶ್ ಜಿ., ಎನ್.ಡಿ.ಡಿ.ಬಿ. ಪ್ರತಿನಿಧಿಯಾಗಿ ಡಾ. ಜಿ. ಕಿಶೋರ್, ಪಶುಸಂಗೋಪನಾ ಇಲಾಖಾ ಪ್ರತಿನಿಧಿಯಾಗಿ ಪಶುಸಂಗೋಪನಾ ಇಲಾಖೆಯ ಉಪನಿರ್ದೇಶಕ (ಆಡಳಿತ)ರಾದ ಡಾ. ಕೆ.ಟಿ. ಪರಮೇಶ್ವರ್, ಕೆಎಂಎಫ್‌ನ ಪ್ರತಿನಿಧಿಯಾಗಿ ಕೆಎಂಎಫ್ ಮಾರುಕಟ್ಟೆ ವಿಭಾಗದ ನಿರ್ದೇಶಕರಾದ ಎಂ. ರಘುನಂದನ್ ಹಾಗೂ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಎಸ್.ಟಿ. ಸುರೇಶ್ ಅವರುಗಳು ಇರುತ್ತಾರೆ.



ಡಿ.ಕೆ. ಸುರೇಶ್
ಅಧ್ಯಕ್ಷರು



ರಾಜಣ್ಣ
ಉಪಾಧ್ಯಕ್ಷರು

## ಉಳ್ಳಾಲದ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ : ಉಚಿತ ವೈದ್ಯಕೀಯ ತಪಾಸಣಾ ಶಿಬಿರ



ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ (ನಿ.) ಉಳ್ಳಾಲ ಶಾಖೆಯ ದಶಮಾನೋತ್ಸವದ ಪ್ರಯುಕ್ತ ಉಚಿತ ವೈದ್ಯಕೀಯ, ದಂತ ಚಿಕಿತ್ಸಾ ಹಾಗೂ ನೇತ್ರ ತಪಾಸಣಾ ಶಿಬಿರವು ಬ್ರಹ್ಮಶ್ರೀ ನಾರಾಯಣ ಗುರು ಸ್ವಾಮಿ ಪ್ರಕಾಶನ ಮತ್ತು ಚಾರಿಟೇಬಲ್ ಟ್ರಸ್ಟ್ (ರಿ.) ಪಡೀಲ್, ಮಂಗಳೂರು, ಬ್ರಹ್ಮಶ್ರೀ ನಾರಾಯಣಗುರು ಬಿಲ್ಲವ ಸೇವಾ ಸಂಘ (ರಿ.) ಮತ್ತು ಮಹಿಳಾ ವಿಭಾಗ, ಬಂಡಿಕೊಟ್ಯ, ಉಳ್ಳಾಲ, ವಿದ್ಯಾರಣ್ಯ ಯುವಕ ವೃಂದ (ರಿ.) ಮತ್ತು ವಿದ್ಯಾರಣ್ಯ ಕಲಾವೃಂದ ಉಳ್ಳಾಲ, ಹಾಗೂ ಶಿವಶಕ್ತಿ ಯುವಕ ಮಂಡಲ (ರಿ.) ಉಳ್ಳಾಲ ಇವರುಗಳ ಸಂಯುಕ್ತ ಆಶ್ರಯದಲ್ಲಿ ಸಮುದಾಯ ಭವನ, ಉಳ್ಳಾಲ ನಗರಸಭೆ ಆವರಣ, ಉಳ್ಳಾಲದಲ್ಲಿ ಜರುಗಿತು.



**ವಿಜಯಪುರ:** ಶ್ರೀ ಶಿವಾಜಿ ಮಹಾರಾಜ ಕೋ ಆಪ್ ಕ್ರೆಡಿಟ್ ಸೊಸಾಯಿಟಿಯಲ್ಲಿ ಧಾರ್ಮಿಕ ಹಾಗೂ ಶಿಕ್ಷಣ ಸಂಸ್ಥೆಗಳಿಗೆ ಸಂಘದ ಧರ್ಮಾರ್ಥ ನಿಧಿಯಿಂದ ದೇಣಿಗೆ ನೀಡುವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶಂಕರ ಕನಸೆ ರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಂಘದ ಆಡಳಿತಮಂಡಳಿ ಸದಸ್ಯರುಗಳು, ಸಂಘದ ಪ್ರಧಾನ ವ್ಯವಸ್ಥಾಪಕರು, ಸಹಾಯಕ ವ್ಯವಸ್ಥಾಪಕರು, ಸಿಬ್ಬಂದಿಗಳು ಹಾಗೂ ಗುರುಹಿರಿಯರು ಉಪಸ್ಥಿತರಿದ್ದರು.

# ಇದೇ ಮೊದಲ ಬಾರಿಗೆ ಆರ್‌ಬಿಐ ಬಳಿ ಇರುವ ಮೀಸಲು ಚಿನ್ನದ ಗಟ್ಟಿಗಳು ಸಾರ್ವಜನಿಕ ವೀಕ್ಷಣೆಗೆ






**ಬೆಂಗಳೂರು:** ಇತಿಹಾಸದಲ್ಲಿಯೇ ಇದೇ ಮೊದಲ ಬಾರಿಗೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಬಳಿ ಇರುವ ಮೀಸಲು ಚಿನ್ನ ಸಾರ್ವಜನಿಕರಿಗೆ ನೋಡಲು ಸಿಕ್ಕಿದೆ. ಹೌದು, ಜಿಯೊ ಸ್ಟುಡಿಯೊದಿಂದ ಹೊರಹೊಮ್ಮಿರುವ ಜಿಯೊ ಹಾಟ್‌ಸ್ಟಾರ್‌ನಲ್ಲಿ ಲಭ್ಯವಿರುವ 'RBI Unlocked beyond the rupee' ಎಂಬ ಡಾಕ್ಯುಮೆಂಟರಿ ವೆಬ್ ಸಿರೀಸ್‌ನಲ್ಲಿ ಆರ್‌ಬಿಐ ರಹಸ್ಯ ಸ್ಥಳದಲ್ಲಿರುವ ಮೀಸಲು ಚಿನ್ನವನ್ನು ಸಾರ್ವಜನಿಕರಿಗೆ ತೋರಿಸಲಾಗಿದೆ.

ವಿಡಿಯೊದಲ್ಲಿ ಹೇಳಿರುವಂತೆ ಇದೇ ಮೊದಲ ಬಾರಿಗೆ ದೇಶದ ಜನರಿಗೆ ಆರ್‌ಬಿಐ ಬಳಿ ಚಿನ್ನದ ಗಟ್ಟಿ ರೂಪದಲ್ಲಿ (ಗೋಲ್ಡ್ ಬಾರ್) ಇರುವ ಚಿನ್ನವನ್ನು ತೋರಿಸಲಾಗಿದೆ (ಸ್ವಲ್ಪ ಪ್ರಮಾಣ ಮಾತ್ರ). ಆರ್‌ಬಿಐ ಬಳಿ ಸದ್ಯ 870 ಟನ್ ಚಿನ್ನದ ಮೀಸಲಿದೆ. ಒಂದೊಂದು ಗೋಲ್ಡ್ ಬಾರ್ 12.5 ಕೆಜಿ ತೂಕವಿದೆ.

ಈ ವೆಬ್ ಸಿರೀಸ್ ಅನ್ನು ಲೇಖಕಿ ಜೋಯಾ ಪರ್ವೀನ್ ಅವರು ನಿರ್ದೇಶಿಸಿದ್ದಾರೆ. ಸೀಸನ್ ಮೊದಲನೇ ಭಾಗವಾದ ಈ ಸಿರೀಸ್‌ನಲ್ಲಿ 4 ಎಪಿಸೋಡ್‌ಗಳಿವೆ. ಇದರಲ್ಲಿ ಆರ್‌ಬಿಐ ನಡೆದು ಬಂದ ಹಾದಿ, ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಆರ್‌ಬಿಐ ಪಾತ್ರ ಮುಂತಾದ ಅಪರೂಪದ ಸಂಗತಿಗಳ ಬಗ್ಗೆ ಬೆಳಕು ಚೆಲ್ಲಲಾಗಿದೆ.

ಆರ್‌ಬಿಐ, ತಲಾ 12.5 ಕೆಜಿ ತೂಕವಿರುವ ಗೋಲ್ಡ್ ಬಾರ್‌ಗಳ 870 ಟನ್ ಚಿನ್ನವನ್ನು ಅತ್ಯಂತ ಬಿಗಿ ಭದ್ರತೆಯಲ್ಲಿ, ರಹಸ್ಯ ಸ್ಥಳದಲ್ಲಿ ಇರಿಸಿದೆ. ಈ ಮೊದಲು ಎಂದೂ ಈ ಚಿನ್ನವನ್ನು ಸಾರ್ವಜನಿಕರಿಗೆ ತೋರಿಸಿರಲಿಲ್ಲ.

1991ರಲ್ಲಿ ಭಾರತ ತೀವ್ರ ಆರ್ಥಿಕ ಬಿಕ್ಕಟ್ಟು ಎದುರಿಸಿತ್ತು. ಹೆಚ್ಚಿನ ಆಮದು ಪರಿಣಾಮ ದೇಶ ಭಾರಿ ಹಣಕಾಸಿನ ಕೊರತೆ ಅನುಭವಿಸಿತ್ತು. ವಿದೇಶಿ ಪಾವತಿಗಳನ್ನು ಮಾಡಲು ದೇಶದಲ್ಲಿ ಹಣವಿರಲಿಲ್ಲ. ಮೂರೇ ವಾರಕ್ಕೆ ಆಗುವಷ್ಟು ವಿದೇಶಿ ವಿನಿಮಯ ಉಳಿದಿತ್ತು. ಆಗ ದೇಶದ ನೆರವಿಗೆ ಬಂದಿದ್ದೇ ಆರ್‌ಬಿಐ ಬಳಿ ಇರುವ ಮೀಸಲು ಚಿನ್ನ. ಸುಮಾರು 100 ಟನ್‌ಗೂ ಅಧಿಕ ಚಿನ್ನವನ್ನು ಲಂಡನ್‌ಗೆ ಸಾಗಿಸಿ ಚಿನ್ನ ಅಡಮಾನ ಇರಿಸಿ ವಿತ್ತೀಯ ಕೊರತೆಯನ್ನು ನೀಗಿಸಲಾಗಿತ್ತು. ಆಗಷ್ಟೇ ಜಾರಿಗೆ ಬಂದಿದ್ದ ಖಾಸಗೀಕರಣ, ಉದಾರೀಕರಣ, ಜಾಗತೀಕರಣದಂತಹ ನೀತಿಗಳಿಂದ ದೇಶದ ಅರ್ಥ ವ್ಯವಸ್ಥೆ ಸರಿ ದಾರಿಗೆ ಬಂದಿತ್ತು.

ಆರ್ಥಿಕತೆ ಒಮ್ಮೊಮ್ಮೆ ಮೇಲೇಳುತ್ತದೆ, ಒಮ್ಮೊಮ್ಮೆ ಬೀಳುತ್ತದೆ. ಆದರೆ ಕೇಂದ್ರೀಯ ಬ್ಯಾಂಕ್‌ನಲ್ಲಿರುವ ಚಿನ್ನದ ಮೀಸಲು ದೇಶದ ಹಿತ ಕಾಯುವ ಆಪತ್ಬಾಂಧವನ ರೀತಿ ಕೆಲಸ ಮಾಡುತ್ತದೆ. 1991ರ ನಂತರ ಚಿನ್ನದ ಮೀಸಲನ್ನು ಬಳಸಿಕೊಳ್ಳುವ ಪರಿಸ್ಥಿತಿ ಬಂದಿಲ್ಲ ಎಂದು ವಿಡಿಯೊದಲ್ಲಿ ಹೇಳುತ್ತಾರೆ. 870 ಟನ್ ಚಿನ್ನದ ಸದ್ಯದ ಮಾರುಕಟ್ಟೆ ಮೌಲ್ಯ ರೂ. 6.80 ಲಕ್ಷ ಕೋಟಿ.



## ಬಿ.ಕೆ. ನಾಗಭೂಷಣಯ್ಯರವರು ನಿಧನ

**ರಾಮನಗರ :** ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಮಾಜಿ ನಿರ್ದೇಶಕರು ಹಾಗೂ ಸಂಸ್ಥಾಪಕ ಅಧ್ಯಕ್ಷರು, ದಿ ಭಾರತಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ರಾಮನಗರ ಆದ ಶ್ರೀ ಬಿ.ಕೆ. ನಾಗಭೂಷಣಯ್ಯರವರು ನಿಧನ ಹೊಂದಿದ್ದು, ಅವರ ನಿಧನಕ್ಕೆ ಮಹಾಮಂಡಳದ ವತಿಯಿಂದ ಅಧ್ಯಕ್ಷರು ಹಾಗೂ ಆಡಳಿತಮಂಡಳಿ ಸದಸ್ಯರುಗಳು ಸಂತಾಪ ವ್ಯಕ್ತಪಡಿಸಿದ್ದಾರೆ.

# ಸದೃಢ ಆರ್ಥಿಕತೆ ರೂಪಿಸಿದ ಜಿಎಸ್‌ಟಿ

## ದೇಶದಲ್ಲಿ ಹೊಸ ತೆರಿಗೆ ವ್ಯವಸ್ಥೆ ಬಂದು ಎಂಟು ವರ್ಷ, ವಿಸ್ತಾರಗೊಂಡ ತೆರಿಗೆ ಆದಾಯದ ಮೂಲಗಳು

**ಹೊಸದಿಲ್ಲಿ:** ದೇಶದ ತೆರಿಗೆ ವ್ಯವಸ್ಥೆಯಲ್ಲಿ ಕ್ರಾಂತಿಕಾರಿ ಬದಲಾವಣೆ ತಂದ ಸರಕು ಮತ್ತು ಸೇವಾ ತೆರಿಗೆ ಜಿಎಸ್‌ಟಿ ಜಾರಿಗೆ ಬಂದು 8 ವರ್ಷ ತುಂಬಲಿದೆ.

ಈ ಎಂಟು ವರ್ಷಗಳ ಅವಧಿಯಲ್ಲಿ ತೆರಿಗೆ ಸಂಗ್ರಹ ಬಹುತೇಕ ದುಪ್ಪಟ್ಟಾಗಿದೆ. ಅಲ್ಲದೆ ಮಾಸಿಕ ಸಂಗ್ರಹದಲ್ಲಿಯೂ ಗಣನೀಯ ಏರಿಕೆಯಾಗಿದೆ. ಜಿಎಸ್‌ಟಿಯಿಂದಾಗಿ ದೇಶದ ಹಣಕಾಸು ಸ್ಥಿತಿ ಮತ್ತಷ್ಟು ಸದೃಢವಾಗಿದೆ. ಜೊತೆಗೆ ತೆರಿಗೆ ಆದಾಯದ ಮೂಲಗಳು ವಿಸ್ತರಣೆಗೊಂಡಿದೆ. ಪರೋಕ್ಷ ತೆರಿಗೆ ರದ್ದಾಗಿ ಏಕರೂಪದ ತೆರಿಗೆ ಪಾವತಿ ವ್ಯವಸ್ಥೆ ಅನುಷ್ಠಾನಕ್ಕೆ ಬಂದಿದೆ. ತೆರಿಗೆ ತಗಾದೆ ಇತ್ಯರ್ಥ ಪ್ರಕ್ರಿಯೆಗಳು ಸರಳಗೊಂಡಿವೆ. ರಾಜ್ಯಗಳ ನಡುವೆ ಸರಕುಗಳ ಸಾಗಾಣೆ ಸರಾಗಗೊಂಡಿತು. ತೆರಿಗೆ ವ್ಯವಸ್ಥೆಯಲ್ಲಿ ಪಾರದರ್ಶಕತೆ ಹೆಚ್ಚಿತು ಆರ್ಥಿಕತೆಯ ಸಬಲೀಕರಣ, ಧೃಢತೆ ಮತ್ತು ಬಲವನ್ನು ಹೆಚ್ಚಿಸಿದೆ.

ಜಿಎಸ್‌ಟಿ ಸಂಗ್ರಹ 2024-25ರ ಹಣಕಾಸು ವರ್ಷದಲ್ಲಿ 22.08 ಲಕ್ಷ ಕೋಟಿ ರೂ. ತಲುಪಿದೆ, ಕಳೆದ ಐದು ವರ್ಷಗಳಿಗೆ ಹೋಲಿಸಿದರೆ ಈ ಪ್ರಮಾಣ ದುಪ್ಪಟ್ಟಾಗಿದೆ. ಮಾಸಿಕ ಸಂಗ್ರಹವು 2024ರಲ್ಲಿ 1.68 ಲಕ್ಷ ಕೋಟಿ ರೂ ಇದ್ದುದು 2025ರ ಏಳು ತಿಂಗಳ ಸರಾಸರಿ ಪರಿಗಣಿಸಿದರೆ 1.84 ಲಕ್ಷ ಕೋಟಿ ರೂಗೆ ಜಿಗಿದಿದೆ. ಏಪ್ರಿಲ್‌ನಲ್ಲಿ 2.37 ಲಕ್ಷ ಕೋಟಿ ರೂ ಹಾಗೂ ಮೇನಲ್ಲಿ 2.01 ಲಕ್ಷ ಕೋಟಿ ರೂ. ಸಂಗ್ರಹವಾಗಿದೆ ಮಾಸಿಕ ಸಂಗ್ರಹ 2021-22ರಲ್ಲಿ ಸರಾಸರಿ 95,000 ಕೋಟಿ ರೂ ಇತ್ತು. ಜಿಎಸ್‌ಟಿ ಅಡಿ ನೋಂದಾಯಿಸಿಕೊಂಡಿರುವ ತೆರಿಗೆದಾರರ ಸಂಖ್ಯೆಯು 2017ರಲ್ಲಿ 65 ಲಕ್ಷ ಇದ್ದುದ್ದು 2025ರಲ್ಲಿ 1.51 ಕೋಟಿಗೆ ಏರಿಕೆಯಾಗಿದೆ

**ನವ ಭಾರತದ ಕ್ರಾಂತಿಕಾರಿ ಶಾಸನ :** ವಾಸ್ತವದಲ್ಲಿ ಜಿಎಸ್‌ಟಿ ರೂಪಿಸಿದ್ದ ಹಿಂದೆ ಇದ್ದ ಡಾ.ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಮೈತ್ರಿಕೂಟ ಸರ್ಕಾರ ಕೆಲವು ಬದಲಾವಣೆಗಳೊಂದಿಗೆ 2017ರ ಜುಲೈ-1ರಂದು ದೇಶದಲ್ಲಿ ಜಿಎಸ್‌ಟಿ ಜಾರಿಗೊಳಿಸಿದ್ದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಹೊಸ ತೆರಿಗೆ ವ್ಯವಸ್ಥೆ, ದೇಶದಲ್ಲಿ ಅನುಷ್ಠಾನಕ್ಕೆ ಬರುವ ಸಂದರ್ಭದಲ್ಲಿ ಕೇಂದ್ರ ಹಣಕಾಸು ಸಚಿವರಾಗಿದ್ದವರು ಅರುಣ್ ಜೇಟ್ಲಿ. "ಜಿಎಸ್‌ಟಿ ನವಭಾರತದ ಕ್ರಾಂತಿಕಾರಿ ಶಾಸನ" ಎಂದು ಮೋದಿ ಬಣ್ಣಿಸಿದ್ದರು. "ಜಿಎಸ್‌ಟಿ ಭಾರತದ ಪರೋಕ್ಷ ತೆರಿಗೆ ಪದ್ಧತಿಯಲ್ಲಿ ಗೇಮ್ ಚೇಂಜರ್ ಆಗಿದೆ" ಎನ್ನುವುದು ಈಗಿನ




ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಭಿಪ್ರಾಯ.

**ನಾಗರೀಕರಿಗೆ ಹೇಗೆ ಅನುಕೂಲ? :** ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಜಾರಿಯಿಂದಾಗಿ ದೇಶದ ನಾಗರೀಕರಿಗೆ ಸಾಕಷ್ಟು ಅನುಕೂಲವಾಗಿದೆ ಎಂದು ಕೇಂದ್ರ ಸರ್ಕಾರ ಪ್ರತಿಪಾದಿಸಿದೆ. ಜಾರಿಗೆ ಬರುವ ಮುನ್ನ ಅಂದರೆ 2017ರ ಅವಧಿಗೆ ಹೋಲಿಸಿದರೆ ಹೇರ್ ಆಯಿಲ್, ಟೂತ್‌ಪೇಸ್ಟ್, ಸೋಪ್, ಡಿಟರ್ಜೆಂಟ್, ಕಾಸ್ಮೆಟಿಕ್, ಪೆನ್ಸಿಲ್, ಹಾಲಿನಪುಡಿ, ಹೊಲಿಗೆ ಯಂತ್ರ, 27 ಇಂಚಿನವರೆಗಿನ ಟಿವಿ, ಮಿಕ್ಸರ್, ಜ್ಯೂಸರ್, ಗ್ಯಾಸ್ ಸ್ಟವ್ ಸೇರಿದಂತೆ ದಿನಬಳಕೆ ಪದಾರ್ಥಗಳ ಮೇಲಿನ ತೆರಿಗೆ ಹೊರೆ ಈಗ ಕಡಿಮೆಯಾಗಿದೆ.

**ಗೇಮ್ ಚೇಂಜರ್ :** ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಧಿಸುತ್ತಿದ್ದ 17 ತೆರಿಗೆಗಳು ಮತ್ತು 13 ಸೆಸ್‌ಗಳನ್ನು ವಿಲೀನ ಮಾಡಲಾಗಿದೆ. ಇದರಿಂದ ಗ್ರಾಹಕರಿಗೆ ತೆರಿಗೆ ಹೊರೆ ಕಡಿಮೆಯಾಗಿದೆ. ಈಗ ಕೇವಲ 4 ಶ್ರೇಣಿಗಳಲ್ಲಿ (ಶೇ.5. ಶೇ.12 ಶೇ.18 ಮತ್ತು ಶೇ.28)ತೆರಿಗೆ ವಿಧಿಸಲಾಗುತ್ತಿದೆ ಜಿಎಸ್‌ಟಿ ಪದ್ಧತಿ ಎರಡು ರೀತಿಯಲ್ಲಿದೆ. ಒಂದು ಕೇಂದ್ರದ್ದು (ಸಿಜಿಎಸ್‌ಟಿ) ಎರಡನೆಯದು ರಾಜ್ಯದ್ದು (ಎಸ್‌ಜಿಎಸ್‌ಟಿ) ಆದರೆ ಎರಡನ್ನು ಸೇರಿಸಿ ಗ್ರಾಹಕರಿಗೆ ತೆರಿಗೆ ವಿಧಿಸಲಾಗುತ್ತದೆ.

**ಭಾರತೀಯರ ಬೆಂಬಲ :** ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್ ಪ್ರಕಾರ ಜಿಎಸ್‌ಟಿ ವ್ಯವಸ್ಥೆಯು ಬಹಳ ಮುಖ್ಯವಾಗಿದೆ ಡಿಲೈಟ್ ನಡೆಸಿದ ಸಮೀಕ್ಷೆಯಲ್ಲಿ ಶೇ.85ಕ್ಕೂ ಹೆಚ್ಚು ಮಂದಿ ಜಿಎಸ್‌ಟಿ ಕುರಿತು ಸಕಾರಾತ್ಮಕ ಅಭಿಪ್ರಾಯ ನೀಡಿದ್ದಾರೆ

ಜಿಎಸ್‌ಟಿ ಪೋರ್ಟಲ್ ಅನ್ನು ಕಾಲಕಾಲಕ್ಕೆ ಅಪ್‌ಡೇಟ್ ಮಾಡಲಾಗಿದೆ. ತೆರಿಗೆ ಪಾವತಿದಾರರಿಗೆ ಸರಳ ಹಾಗೂ ಖಚಿತ

ಮಾರ್ಗದರ್ಶಿ ಸೂತ್ರಗಳನ್ನು ಒದಗಿಸಲಾಗುತ್ತದೆ. ಹೀಗಾಗಿ ಈ ವ್ಯವಸ್ಥೆಯು ಹೆಚ್ಚು ಯಶಸ್ವಿಯಾಗಿದೆ. ಇದರ ಮೂಲಕ ಬೋಗಸ್ ಕ್ಲೇಮ್‌ಗಳನ್ನು ತಡೆಯಬಹುದು. ತೆರಿಗೆ ಅಧಿಕಾರಿಗಳು ತೆರಿಗೆ ವಂಚನೆಯನ್ನು ತಡೆಯಲು ಹಲವು ಹೊಸ ವಿಧಾನಗಳನ್ನು ಅನುಸರಿಸುತ್ತಿದ್ದಾರೆ. ಜಿಎಸ್‌ಟಿ ಅಧಿಕಾರಿಗಳು ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ಕ್ಲೇಮ್ ಮಾಡಿದ ನಂತರ ಶೆಲ್ ಕಂಪೆನಿಗಳನ್ನು ಪತ್ತೆ ಹಚ್ಚಲು ಡೇಟಾ ವಿಶ್ಲೇಷಣೆ, ಎಐ ಮತ್ತು ಮಿಷನ್ ಲರ್ನಿಂಗ್ ತಂತ್ರಜ್ಞಾನವನ್ನು ಬಳಸಲು ಪ್ರಾರಂಭಿಸಿದ್ದಾರೆ.

**ಜಿಎಸ್‌ಟಿ ಪ್ರಮುಖ ಸಾಧನೆಗಳು :** ಒಂದು ದೇಶ. ಒಂದು ತೆರಿಗೆ ಪದ್ಧತಿ ಜಾರಿಗೆ ಬಂದಿದ್ದು ತೆರಿಗೆ ವ್ಯವಸ್ಥೆಯಲ್ಲಿ ಡಿಜಿಟಲ್ ಕ್ರಾಂತಿಯಾಗಿದೆ. ಕೇಂದ್ರ ಮತ್ತು ರಾಜ್ಯಗಳ ನಡುವೆ ಆದಾಯದ ಸುಗಮ ಹಂಚಿಕೆ ಸಾಧ್ಯವಾಗಿದ್ದು, ಇದರಿಂದ ಸಹಕಾರ ಒಕ್ಕೂಟ ವ್ಯವಸ್ಥೆ ಬಲಗೊಂಡಿದೆ.

ಅನೇಕ ವಹಿವಾಟುಗಳು ತೆರಿಗೆ ವ್ಯಾಪ್ತಿಗೆ ಬಂದಿರುವುದರಿಂದ ಆರ್ಥಿಕತೆಗೆ ಉತ್ತೇಜನ ಲಭಿಸಿದೆ. ಜಿಎಸ್‌ಟಿ ನೋಂದಣಿ, ರಿಟನ್ ಫೈಲಿಂಗ್, ಪಾವತಿ ಹೀಗೆ ಎಲ್ಲಾ ಪ್ರಕ್ರಿಯೆಗಳನ್ನು ಜಿಎಸ್‌ಟಿಎನ್. ಪೋರ್ಟಲ್ ನಲ್ಲಿ ಮಾಡಿ ಕೊಳ್ಳಬಹುದು. ಗಡಿಯಲ್ಲಿ ಚೆಕ್‌ಪೋಸ್ಟ್‌ಗಳನ್ನು ತೆರವುಗೊಳಿಸಿರುವುದರಿಂದ, ರಾಜ್ಯಗಳ ನಡುವೆ ಸರಕುಗಳ ಸಾಗಾಣೆ ಸುಲಭವಾಗಿದೆ.

ದೀರ್ಘಕಾಲದಲ್ಲಿ ತೆರಿಗೆ ದರಗಳು ಇಳಿಯುವುದರಿಂದ ಹಣದುಬ್ಬರ ಸಹ ಕಡಿಮೆಯಾಗಲಿದೆ ಎಂಬುದು ತಜ್ಞರ ಅಭಿಪ್ರಾಯ.

2024–25ರಲ್ಲಿ ಟಾಪ್ 3 ಜಿ.ಎಸ್.ಟಿ ಪಾವತಿಸಿದ ರಾಜ್ಯಗಳು

1 ಮಹಾರಾಷ್ಟ್ರ – 3,59,854.70 ಕೋಟಿ

2 ಗುಜರಾತ್ – 1,74,938 ಕೋಟಿ

3 ಕರ್ನಾಟಕ – 1,43,023 ಕೋಟಿ

**ಸಾರ್ವಕಾಲಿಕ ದಾಖಲೆ :** ಏಪ್ರಿಲ್–2025ರಲ್ಲಿ ರೂ.2.37 ಲಕ್ಷ ಕೋಟಿ ಸಂಗ್ರಹ

## ಸಹಕಾರ ಇಲಾಖೆಯ ಅಪರ ನಿಬಂಧಕರು ಹಾಗೂ ಜಂಟಿ ನಿಬಂಧಕರು ಮತ್ತು ಉಪನಿಬಂಧಕರುಗಳ ವರ್ಗಾವಣೆ

ಸಹಕಾರ ಇಲಾಖೆಯ ಈ ಕೆಳಕಂಡ ಅಪರ ನಿಬಂಧಕರು ಮತ್ತು ಜಂಟಿ ನಿಬಂಧಕರು ಹಾಗೂ ಉಪನಿಬಂಧಕರುಗಳನ್ನು ಅವರ ಮುಂದೆ ಸೂಚಿಸಿರುವ ಹುದ್ದೆಗಳಿಗೆ ವರ್ಗಾಯಿಸಿ ಸರ್ಕಾರ ಆದೇಶ ಹೊರಡಿಸಿದೆ.

| | |
|---|---|
| ಬಿ.ಆರ್. ಲಿಂಗರಾಜು | ಸಹಕಾರ ಸಂಘಗಳ ಅಪರ ನಿಬಂಧಕರು ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಬೆಂಗಳೂರು |
| ಎಂ.ಡಿ. ಮಲ್ಲೂರು | ಸಹಕಾರ ಸಂಘಗಳ ಅಪರ ನಿಬಂಧಕರು ಹಾಗೂ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಬೆಂಗಳೂರು. |
| ಸುರೇಶ್ ಗೌಡ | ಸಹಕಾರ ಸಂಘಗಳ ಜಂಟಿ ನಿಬಂಧಕರು, ಸಹಕಾರ ಸಂಘಗಳ ನಿಬಂಧಕರ ಕಛೇರಿ (ಕಾನೂನು ಕೋಶ), ಬೆಂಗಳೂರು |
| ಕಲ್ಲಪ್ಪ ಓಬಣ್ಣಗೋಳ್ | ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಳಗಾವಿ ಪ್ರಾಂತ, ಬೆಳಗಾವಿ |
| ಪ್ರವೀಣ್ ಬಿ ನಾಯಕ್ | ಮುಖ್ಯಕಾರ್ಯನಿರ್ವಹಣಾಧಿಕಾರಿ, ಚಿಕ್ಕಮಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು. |
| ಎನ್. ವೆಂಕಟೇಶ | ಸಹಕಾರ ಸಂಘಗಳ ಜಂಟಿ ನಿಬಂಧಕರು (ಪಟ್ಟಣ ಸಹಕಾರ ಬ್ಯಾಂಕುಗಳ ವಿಭಾಗ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು. |
| ಪಿ. ಮಹೇಶ್ | ಸಹಕಾರ ಸಂಘಗಳ ಜಂಟಿ ನಿಬಂಧಕರು (ಐ.ಸಿ.ಡಿ.ಪಿ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು. |
| ಮಂಜುಳ ಎಸ್ | ಸಹಕಾರ ಸಂಘಗಳ ಉಪನಿಬಂಧಕರು – ಮುಖ್ಯಕಾರ್ಯನಿರ್ವಹಣಾಧಿಕಾರಿ, ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ದಾವಣಗೆರೆ. |
| ವಿಜಯಕುಮಾರ್ | ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ಪೀಠಾಧಿಕಾರಿಗಳು, ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ, ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿ ನಿ., ಬೆಂಗಳೂರು |
| ಹೆಚ್.ಡಿ. ರವಿಕುಮಾರ್ | ಸಹಕಾರ ಸಂಘಗಳ ಉಪನಿಬಂಧಕರು, ಕೊಡಗು ಜಿಲ್ಲೆ ಮಡಿಕೇರಿ |
| ರಮೇಶ ಗಣಪತಿ ಬಗಲಿ | ಸಹಕಾರ ಸಂಘಗಳ ಉಪನಿಬಂಧಕರು, ಕೊಪ್ಪಳ ಜಿಲ್ಲೆ, ಕೊಪ್ಪಳ |
| ಸಿ.ಕೆ. ಮಹಾಲಕ್ಷ್ಮಿ | ಸಹಕಾರ ಸಂಘಗಳ ಉಪನಿಬಂಧಕರು, ರಾಜ್ಯಪ್ರತಿನಿಧಿ (ಸಹಕಾರ) ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ, ಬೆಂಗಳೂರು |


5 ಜುಲೈ, 2025 [ಜುಲೈ ಮೊದಲ ಶನಿವಾರ]

# ಅಂತಾರಾಷ್ಟ್ರೀಯ ಸಹಕಾರ ದಿನ

▸▸ ಶಶಿಧರ ಎಲೆ, ಸಹಕಾರ ಸಂಘಗಳ ಅಪರ ನಿಬಂಧಕರು (ನಿ.), ಬೆಂಗಳೂರು

**ಸುಸ್ಥಿರ ಅಭಿವೃದ್ಧಿ ಎಂದರೆ ಭೂಮಿಯ ಸಕಲ ಜೀವ ಜಗತ್ತಿನ ಈಗಿನ ಅವಶ್ಯಕತೆಗಳನ್ನು ಪೂರೈಸುವುದು ಮತ್ತು ಭವಿಷ್ಯದ ಜೀವ ಜಗತ್ತಿನ ಅವಶ್ಯಕತೆಗಳ ಪೂರೈಕೆಗಾಗಿ ಅಗತ್ಯ ಸಾಮರ್ಥ್ಯವನ್ನು ಕಾಪಾಡಿಕೊಂಡು ಅಭಿವೃದ್ಧಿ ಹೊಂದುವುದಾಗಿದೆ. ಕೈಗಾರಿಕರಣದಿಂದ ಆದ ಪರಿಣಾಮವಾಗಿ ಮಾನವನ 'ಅಗತ್ಯತೆ'ಗಳು ಹೆಚ್ಚಿದಂತೆ 'ಬಳಕೆ' ಪ್ರಮಾಣವು ಹೆಚ್ಚುತ್ತಾ ನೈಸರ್ಗಿಕ ಸಂಪನ್ಮೂಲಗಳ ಅತಿಯಾದ ಬಳಕೆಯಿಂದ 'ಪ್ರಾಕೃತಿಕ ಅಸಮತೋಲನ'ಕ್ಕೆ ಕಾರಣವಾಗಿದೆ. ಇದರಿಂದ ಆರ್ಥಿಕ, ಸಾಮಾಜಿಕ ಶೋಷಣೆ, ಅಸಮಾನತೆಗೂ ಕಾರಣವಾಗಿದೆ. ಆದುದರಿಂದ ಈಗಿನ ಅವಶ್ಯಕತೆ ಸುಸ್ಥಿರ ಅಭಿವೃದ್ಧಿ (sustainable developmen). ಇದನ್ನು ಸಹಕಾರಿಗಳಾದ ನಾವು ನಮ್ಮ ಸಂಸ್ಥೆಗಳ ಮೂಲಕ ಹೇಗೆ ಸಾಧಿಸಬಲ್ಲೆವು? ಎಂಬುದು ನಮ್ಮ ಮುಂದಿರುವ ಪ್ರಶ್ನೆ.**

ವಿಶ್ವದಾದ್ಯಂತ ಎಲ್ಲ ಸಹಕಾರ ಸಂಘಗಳು ಸಂಭ್ರಮಿಸಬೇಕಾದ ದಿನ. ಭಾರತವೂ ಇದರಲ್ಲಿ ಪಾಲ್ಗೊಂಡು ಸಂಭ್ರಮಿಸಲು ಹೆಚ್ಚಿನ ಕಾರಣವಿದೆ. ಅದು ಭಾರತ 2024ರ ಐ.ಸಿ.ಎ (ಅಂತರ ರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆ)ಯ ವಾರ್ಷಿಕ ಗೋಷ್ಠಿಯ ನಾಯಕತ್ವ ವಹಿಸಿಕೊಂಡು ಭಾರತದಲ್ಲಿ ನಡೆಸಿದ್ದು, 2025ನ್ನು 'ಅಂತಾರಾಷ್ಟ್ರೀಯ ಸಹಕಾರ ವರ್ಷ' ಎಂದು ಘೋಷಿಸಿದ್ದು, ಇದರಿಂದ ಭಾರತದಲ್ಲಿನ ಸಹಕಾರ ಕ್ಷೇತ್ರ ವಿಶ್ವ ವಲಯದ ಒಂದು ಪ್ರಮುಖ ಭಾಗವಾಗಿದೆ ಎಂಬುದನ್ನು ಎತ್ತಿ ತೋರಿಸಿದಂತಾಗಿದೆ. ಈ ಸಂದರ್ಭದಲ್ಲಿ 'ಅಂತಾರಾಷ್ಟ್ರೀಯ ಸಹಕಾರ ದಿನ' ಆಚರಣೆಯೂ ಭಾರತದ ಸಹಕಾರಿಗಳಲ್ಲಿ ತಮ್ಮ ಆತ್ಮಾವಲೋಕನಕ್ಕೆ ಸಮಯ ಒದಗಿಸಿದೆ. ತಮ್ಮ ಸಾಧನೆ, ಯಶಸ್ಸನ್ನು ಸಂಭ್ರಮಿಸುವುದಲ್ಲದೆ ತಮ್ಮ ಮುಂದಿರುವ ಸವಾಲುಗಳನ್ನು ಎದುರಿಸಲು ಸಮಾಜಕ್ಕೆ / ಸಮುದಾಯಕ್ಕೆ ನೀಡಬೇಕಾಗಿರುವ 'ಕೊಡುಗೆ' ಬಗ್ಗೆ ಮತ್ತು ಅದರಿಂದ ಜಗತ್ತಿನ 'ಸುಸ್ಥಿರ ಅಭಿವೃದ್ಧಿ' ಹೇಗೆ ಸಾಧ್ಯ ಎಂಬ ಬಗ್ಗೆ ಪರಾಮರ್ಶೆ ಈ ದಿನಮಾನಗಳ ಅಗತ್ಯ. 2005ರ ಅಂತಾರಾಷ್ಟ್ರೀಯ ಸಹಕಾರ ದಿನದ ಘೋಷಣೆ "ಸಹಕಾರ / ಸಹಕಾರ ಸಂಘಗಳು : ಉತ್ತಮ ಜಗತ್ತಿಗಾಗಿ ಒಳಗೊಳ್ಳುವ ಮತ್ತು ಸುಸ್ಥಿರ ಪರಿಹಾರಗಳನ್ನು ಒದಗಿಸುತ್ತವೆ." ಇದರ ವಿಶ್ಲೇಷಣೆ 'ಸಹಕಾರ' ಎಂಬ ಬೃಹತ್ ವೃಕ್ಷ ಜಗತ್ತನ್ನು ಕಾಡುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ಸಂಕಷ್ಟಗಳ ಪರಿಹಾರಾತ್ಮಕ ಸಂಸ್ಥೆಗಳಾಗಿ ಮತ್ತು ವಿಶ್ವಸಂಸ್ಥೆ ಘೋಷಿಸಿರುವ 2030 ರೊಳಗೆ ತಲುಪಬೇಕಾದ 17 ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಗೆ ಸಾಧನವಾಗಿವೆ ಎಂಬುದಾಗಿದೆ.




ಅಂತಾರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆ (ಐ.ಸಿ.ಎ – International Co-operative Alliance) 1923 ರಿಂದಲೂ 'ಅಂತಾರಾಷ್ಟ್ರೀಯ ಸಹಕಾರ ದಿನ'ವನ್ನು ಆಚರಿಸುತ್ತಿದೆ. 1992ರಲ್ಲಿ ವಿಶ್ವಸಂಸ್ಥೆಯು ತನ್ನ ಠರಾವಿನ ಮೂಲಕ ಇದಕ್ಕೆ ಮಾನ್ಯತೆ ನೀಡಿತು. ಐ.ಸಿ.ಎ.ಯ ಶತಮಾನೋತ್ಸವ 1995ರಲ್ಲಿ ನಡೆದಿದ್ದು ಅದರ ಅಂಗವಾಗಿ ಪ್ರತಿವರ್ಷ ಜುಲೈ ತಿಂಗಳ ಮೊದಲ ಶನಿವಾರವನ್ನು ವಿಶ್ವಸಂಸ್ಥೆ ಅಂಗೀಕರಿಸಿರುವ 'ಅಂತಾರಾಷ್ಟ್ರೀಯ ಸಹಕಾರ ದಿನ'ವಾಗಿ ಆಚರಿಸಲಾಗುತ್ತಿದೆ.

ವಿಶ್ವ ಸಂಸ್ಥೆಯು ಜಗತ್ತಿನ ಸರ್ವ ಜನರ ಆರ್ಥಿಕ, ಸಾಮಾಜಿಕ ಅಭಿವೃದ್ಧಿಯ ಸದಾಶಯವನ್ನು ಹೊಂದಿದೆ. ಭೂಮಿಯ ಜೀವ ಜಗತ್ತು ಮಾನವನನ್ನು ಒಳಗೊಂಡಂತೆ ಸುಸ್ಥಿರತೆಯಿಂದ ಕೂಡಿರಬೇಕು.

ಮುಂದಿನ ಪೀಳಿಗೆಗಳಿಗೆ 'ವಾಸಯೋಗ್ಯ' ಗ್ರಹವಾಗಿ 'ಭೂಮಿ'



**ಆರ್ಥಿಕ ತಜ್ಞ, ನೊಬೆಲ್ ಪಾರಿತೋಷಕ ವಿಜೇತ ಅಮರ್ತ್ಯ ಸೇನ್ ರವರು 'ಅಭಿವೃದ್ಧಿ' ಎಂದರೆ ಜನರ ಸ್ವಾತಂತ್ರ್ಯ ಮತ್ತು ಸಾಮರ್ಥ್ಯದ ಹೆಚ್ಚಳ' ಎಂದು ವಿಶ್ಲೇಷಿಸಿದ್ದಾರೆ. ಇದಕ್ಕೆ ಸಾಧನ ಸಹಕಾರ ಅಲ್ಲವೇ? ಕೃಷಿ, ಕೃಷಿ ಅವಲಂಭಿತ, ಪಶು ಸಂಗೋಪನೆ, ಹೈನುಗಾರಿಕೆ, ಸಣ್ಣ ಕೈಗಾರಿಕೆ ಉತ್ಪನ್ನಗಳ ಹೆಚ್ಚಳ ಮಾರಾಟ, ಮೌಲ್ಯ ವರ್ಧನೆ, ಸಂಬರಾಜು ಸರಪಳಿ ಗೋದಾಮು, ಶೈತ್ಯಾಗಾರ, ಸಾಗಾಟ, ಚಿಲ್ಲರೆ ಮಾರಾಟ, ಇವುಗಳಲ್ಲಿ ಹೂಡಿಕೆ. ಗಳಲ್ಲಿ ಸಹಕಾರದ ಪಾಲನ್ನು ಅಧಿಕಗೊಳಿಸಬೇಕಾಗಿದೆ.**

ಉಳಿಯಬೇಕು ಎಂಬುದು ಸದಾಶಯ. ಸೆಪ್ಟೆಂಬರ್ 15-2015ರಲ್ಲಿ "ನಮ್ಮ ವಿಶ್ವದ ಪರಿವರ್ತನೆ"ಗಾಗಿ 17 ಸುಸ್ಥಿರ ಅಭಿವೃದ್ಧಿಯ ಗುರಿಗಳನ್ನು ನೀಡಿತು. ಎಲ್ಲ ರಾಷ್ಟ್ರಗಳು ಈ 'ಸುಸ್ಥಿರ ಗುರಿ' ಸಾಧನೆಯನ್ನು ವ್ಯವಸ್ಥಿತವಾಗಿ ಮಾಡಬೇಕು ಎಂದು ಘೋಷಿಸಿತು. ಇದರಲ್ಲಿ ಸಹಕಾರ ವಲಯ ಪ್ರಜಾಸತ್ತಾತ್ಮಕ ಮತ್ತು ತನ್ಮೂಲಕ ಎಲ್ಲರನ್ನೂ ಒಳಗೊಳ್ಳುವ ವಲಯವಾಗಿರುತ್ತದೆ. ಅಸಮಾನತೆ, ಹಸಿವು, ಅನಾರೋಗ್ಯ, ಕುಲಷಿತ ಪರಿಸರ, ಮುಂತಾದ ಜಗತ್ತಿನ ಅನಿಷ್ಟಗಳ ಹೋಗಲಾಡಿಸುವ ಸಾಧನಗಳಾಗಿ ಸಹಕಾರ ಸಂಘಗಳು ಕಾರ್ಯವೆಸಗಬಲ್ಲವು.

ವಿಶ್ವದ ಎಲ್ಲ ರಾಷ್ಟ್ರಗಳಲ್ಲಿ ಅಲ್ಲಿ ಯಾವುದೇ ರಾಜಕೀಯ ವ್ಯವಸ್ಥೆ ಅಸ್ತಿತ್ವದಲ್ಲಿದ್ದರೂ (ಏಕಸ್ವಾಮಿತ್ಯ, ಪ್ರಜಾಪ್ರಭುತ್ವ, ಕಮ್ಯೂನಿಸಂ) ಇದ್ದರು ಸಹಕಾರ ತತ್ವಗಳ ಆಧಾರದಲ್ಲಿ ಸಂಘಟನೆ ಹೊಂದಲು ಆರ್ಥಿಕ, ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ಯಾವುದೇ ಅಡೆತಡೆಗಳಿಲ್ಲ. ಸುಸ್ಥಿರ ಅಭಿವೃದ್ಧಿ ಎಂದರೆ ಭೂಮಿಯ ಸಕಲ ಜೀವ ಜಗತ್ತಿನ ಈಗಿನ ಅವಶ್ಯಕತೆಗಳನ್ನು ಪೂರೈಸುವುದು ಮತ್ತು ಭವಿಷ್ಯದ ಜೀವ ಜಗತ್ತಿನ ಅವಶ್ಯಕತೆಗಳ ಪೂರೈಕೆಗಾಗಿ ಅಗತ್ಯ ಸಾಮರ್ಥ್ಯವನ್ನು ಕಾಪಾಡಿಕೊಂಡು ಅಭಿವೃದ್ಧಿ ಹೊಂದುವುದಾಗಿದೆ. ಕೈಗಾರಿಕರಣದಿಂದ ಆದ ಪರಿಣಾಮವಾಗಿ ಮಾನವನ 'ಅಗತ್ಯತೆ'ಗಳು ಹೆಚ್ಚಿದಂತೆ 'ಬಳಕೆ' ಪ್ರಮಾಣವು ಹೆಚ್ಚುತ್ತಾ ನೈಸರ್ಗಿಕ ಸಂಪನ್ಮೂಲಗಳ ಅತಿಯಾದ ಬಳಕೆಯಿಂದ 'ಪ್ರಾಕೃತಿಕ ಅಸಮತೋಲನ'ಕ್ಕೆ ಕಾರಣವಾಗಿದೆ. ಇದರಿಂದ ಆರ್ಥಿಕ, ಸಾಮಾಜಿಕ ಶೋಷಣೆ, ಅಸಮಾನತೆಗೂ ಕಾರಣವಾಗಿದೆ. ಆದುದರಿಂದ ಈಗಿನ ಅವಶ್ಯಕತೆ ಸುಸ್ಥಿರ ಅಭಿವೃದ್ಧಿ (sustainable developmen). ಇದನ್ನು ಸಹಕಾರಿಗಳಾದ ನಾವು ನಮ್ಮ ಸಂಸ್ಥೆಗಳ ಮೂಲಕ ಹೇಗೆ ಸಾಧಿಸಬಲ್ಲೆವು? ಎಂಬುದು ನಮ್ಮ ಮುಂದಿರುವ ಪ್ರಶ್ನೆ.

ಇದರೊಡನೆ ಸುಸ್ಥಿರ ಅಭಿವೃದ್ಧಿ ಗುರಿ ಸಾಧಿಸುವಲ್ಲಿ ಭಾರತ ಆದ ನಾವು ಎಲ್ಲಿದ್ದೇವೆ ಎಂಬ ಪ್ರಶ್ನೆ ಮೂಡುತ್ತದೆ. ವಿಶ್ವ ಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಪರಿಹಾರ ಜಾಲ ತನ್ನ ವರದಿಯನ್ನು ಬಿಡುಗಡೆ ಮಾಡಿದೆ. ಅದರಂತೆ 2024ರಲ್ಲಿ 109ನೇ ಸ್ಥಾನದಲ್ಲಿದ್ದ ಭಾರತ 99ನೇ ಸ್ಥಾನ ತಲುಪಿದೆ. ಇದರಿಂದ ಅಲ್ಪ ಪ್ರಗತಿ ಸಾಧಿಸಿದೆ ಎಂಬದು ಕಂಡುಬರುತ್ತದೆ. ಯೂರೋಪ್ ಖಂಡದ ರಾಷ್ಟಗಳು ಮೊದಲ 20 ಸ್ಥಾನಗಳಲ್ಲಿವೆ. ಫಿನ್‌ಲೆಂಡ್, ಸ್ವೀಡನ್, ಮತ್ತು ಡೆನ್ಮಾರ್ಕ ಮೊದಲ ಮೂರು ಸ್ಥಾನದಲ್ಲಿವೆ. ಚೀನಾ 49. ಅಮೇರಿಕಾ 44. ಎಂದರೆ ಭಾರತ ಇನ್ನೂ ಸಾಧನೆ ಮಾಡಬೇಕಾದ್ದು ಸಾಕಷ್ಟಿದೆ ಎಂದಾಯ್ತು ಇದಕ್ಕೆ 'ಸಹಕಾರ ವಲಯ' ಸಾಕಷ್ಟು ಕೊಡುಗೆ ನೀಡಬಲ್ಲುದೆ? ಅಭಿವೃದ್ಧಿ ಸಾಧಿಸಿರುವ ಯೂರೋಪ್ ಖಂಡದ ರಾಷ್ಟಗಳಲ್ಲಿ ಸಹಕಾರ ವಲಯ ಪ್ರಬುದ್ಧವಾಗಿ ನಡೆಯುತ್ತಿರುವುದು ಖಾಸಗಿ ವಲಯಕ್ಕೆ ಸವಾಲು ಒಡ್ಡಿ ನಡೆಯುತ್ತಿರುವುದನ್ನು ನಾವು ಈ ಸಂದರ್ಭದಲ್ಲಿ, ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಮೇಲಿನ ಅಂಶಗಳ ಆಧಾರದ ಮೇರೆಗೆ ಭಾರತದ ಸಾಧನೆ ಮತ್ತು ಅದರಲ್ಲಿ 'ಸಹಕಾರ ವಲಯ'ದ ಪಾಲನ್ನು ವಿಶ್ಲೇಷಿಸಬೇಕಾಗಿದೆ. ಭಾರತ ದ ಜಿ.ಡಿ.ಪಿ. ಗಾತ್ರ ರೂ 357.49 ಲಕ್ಷ ಕೋಟಿ. ಬೆಳವಣಿಗೆ ದರ ಶೇ.6. ಒಂದು ದಶಕದ ಹಿಂದೆ ಹನ್ನೊಂದನೆ ಸ್ಥಾನದಲ್ಲಿದ್ದ ನಾವು ನಾಲ್ಕನೇ ಸ್ಥಾನಕ್ಕೆ ಬರುತ್ತಿರುವುದು ದೊಡ್ಡ ಸಂಗತಿಯೇ ಸರಿ. ಆದರೆ, ಸುಸ್ಥಿರ ಅಭಿವೃದ್ಧಿಗೆ ಅಗತ್ಯವಾದ 'ಮಾನವ ಅಭಿವೃದ್ಧಿ ಸೂಚ್ಯಾಂಕ' ದಲ್ಲಿ 130ನೇ ಸ್ಥಾನದಲ್ಲಿದ್ದೇವೆ. ಮಾನವ ಸೂಚ್ಯಂಕದಲ್ಲಿ ಜನರ ಶಿಕ್ಷಣ, ತಲಾ ಆದಾಯ, ಪೌಷ್ಠಿಕತೆ, ಜೀವಾವಧಿ, ಮುಂತಾದ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಭಾರತದ ಒಟ್ಟಾರೆ ಸಂಪತ್ತಿನ ಶೇ.40 ಭಾಗ ಕೇವಲ ಶೇ.01ರ ಶ್ರೀಮಂತರಲ್ಲಿದೆ. ಕೆಳಗಿನ ಶೇ.50 ಜನಸಂಖ್ಯೆ ಶೇ.03 ರಷ್ಟು ಸಂಪತ್ತನ್ನ ಹಂಚಿಕೊಂಡಿದೆ. ಇಷ್ಟು ಅಸಮಾನತೆ ಇರುವಲ್ಲಿ 80 ಕೋಟಿ ಗೂ ಮೀರಿದ ಜನತೆಗೆ ಉಚಿತ ಆಹಾರ ಒದಗಿಸಬೇಕಾದ ಸ್ಥಿತಿಯಲ್ಲಿದ್ದೇವೆ. ಇಂತಹ ಪರಿಸ್ಥಿತಿಯಲ್ಲಿ

ಸಹಕಾರಿಗಳಾದ ನಾವು ಎಷ್ಟು ಜನರನ್ನು ಒಳಗೊಂಡಿದ್ದೇವೆ?

ಸಕ್ರಿಯವಾಗಿ ನಮ್ಮ ಸಂಸ್ಥೆಯಲ್ಲಿ ಬಾಗೀಧಾರರಾಗಿರುತ್ತಾರೆ? ನಮ್ಮ ಸಂಸ್ಥೆಯ ಚಟುವಟಿಕೆಗಳನ್ನು ವಿಸ್ತರಿಸುವ ಬಗೆ ಹೇಗೆ? ನಮ್ಮ ಉದ್ದೇಶಗಳನ್ನು ನಾವು ಈಡೇರಿಸುವಲ್ಲಿ ಸವಾಲುಗಳಾದರೂ ಯಾವುವು? ಸವಾಲುಗಳನ್ನು ಎದುರಿಸುವ ಬಗೆ ಹೇಗೆ? ಮಾರ್ಗೋಪಾಯಗಳಾದರೂ ಯಾವುವು? ಸಂಪನ್ಮೂಲಗಳನ್ನು ಅಧಿಕಗೊಳಿಸಿಕೊಳ್ಳುವ ಬಗೆ ಹೇಗೆ? ಲಭ್ಯ ಸಂಪನ್ಮೂಲಗಳನ್ನು ಸದ್ಬಳಕೆ ಮಾಡಿಕೊಳ್ಳುತ್ತಿದ್ದೇವೆಯೆ? ಮುಂತಾದ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾಗಿದೆ. ಇದರಿಂದ ಸಹಕಾರ ಸಂಘಗಳು / ಸಹಕಾರ ವಲಯ ಈ ಅಗಾದ ಅಸಮತೋಲನೆ ನಿವಾರಣೆಗೆ ತನ್ನ ಕೊಡುಗೆ ನೀಡಲು ಸಾಧ್ಯ.

ಆರ್ಥಿಕ ತಜ್ಞ, ನೊಬೆಲ್ ಪಾರಿತೋಷಕ ವಿಜೇತ ಅಮರ್ತ್ಯ ಸೇನ್ ರವರು 'ಅಭಿವೃದ್ಧಿ' ಎಂದರೆ ಜನರ ಸ್ವಾತಂತ್ರ್ಯ ಮತ್ತು ಸಾಮರ್ಥ್ಯದ ಹೆಚ್ಚಳ' ಎಂದು ವಿಶ್ಲೇಷಿಸಿದ್ದಾರೆ. ಇದಕ್ಕೆ ಸಾಧನ ಸಹಕಾರ ಅಲ್ಲವೇ? ಕೃಷಿ, ಕೃಷಿ ಅವಲಂಭಿತ, ಪಶು ಸಂಗೋಪನೆ, ಹೈನುಗಾರಿಕೆ, ಸಣ್ಣ ಕೈಗಾರಿಕೆ ಉತ್ಪನ್ನಗಳ ಹೆಚ್ಚಳ ಮಾರಾಟ, ಮೌಲ್ಯ ವರ್ಧನೆ, ಸಂಬರಾಜು ಸರಪಳಿ ಗೋದಾಮು, ಶೈತ್ಯಾಗಾರ, ಸಾಗಾಟ, ಚಿಲ್ಲರೆ ಮಾರಾಟ, ಇವುಗಳಲ್ಲಿ ಹೂಡಿಕೆ. ಗಳಲ್ಲಿ ಸಹಕಾರದ ಪಾಲನ್ನು ಅಧಿಕಗೊಳಿಸಬೇಕಾಗಿದೆ. ಇದರಿಂದ ಗಳಿಕೆಯಾದ ಲಾಭವು ಸದಸ್ಯರಿಗೆ ಡಿವಿಡೆಂಡ್, (ಲಾಭಾಂಶ), ಬೋನಸ್ ಈ ಪದಲ್ಲಿ ಹಂಚಿಕೆಯಾಗುತ್ತದೆ. ಆಪತ್ ಧನ (ರಿಸರ್ವ್ ಫಂಡ್) ಮತ್ತು ನಿಧಿಗಳ ಸೃಷ್ಟಿಯಿಂದ ಮುಂದಿನ ಪೀಳಿಗೆಗೂ ಬಂಡವಾಳ ಮುಂದುವರಿಯುತ್ತದೆ. ಇದರಿಂದ ಆರ್ಥಿಕ ಪ್ರಗತಿಯೊಂದಿಗೆ ಸಾಮಾಜಿಕ ನ್ಯಾಯ ಒದಗುತ್ತದೆ. ಸಹಕಾರ ತತ್ವ 'ಸಾಮಾಜಿಕ ಕಳಕಳಿ' ಪಾಲನೆಯಿಂದ 'ಸಮೂಹ/ಸಮಾಜಕ್ಕೆ' ಅಗತ್ಯ ಅನೇಕ ಕಾರ್ಯಕ್ರಮಗಳದ ಶಿಕ್ಷಣ, ಆರೋಗ್ಯ, ಬಟ್ಟೆ, ನೆರಳು (ಸೂರು) ಒದಗಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದಾಗಿದೆ (ಹಮ್ಮಿಕೊಳ್ಳಲಾಗಿದೆ.) ಆಹಾರ ಪೋಲನ್ನು ತಡೆಗಟ್ಟುವುದು, ಕೊಯ್ಲು ಪೂರ್ವ ಮತ್ತು ನಂತರದ ಆಹಾರ ಧಾನ್ಯ, ತರಕಾರಿ, ಹಣ್ಣು ನಷ್ಟಗಳನ್ನು ತಡೆಗಟ್ಟುವುದು, ನವೀಕರಿಸ ಬಹುದಾದ ಇಂಧನದ (ಸೌರ ಶಕ್ತಿ, ಪವನ ಶಕ್ತಿ) ಬಳಕೆ ಮೂಲಕ ಪರಿಸರವನ್ನು ರಕ್ಷಿಸಲು ಸಾಧ್ಯ, ತಮ್ಮ ನೆ ಪರಿಸರದಲ್ಲಿ ಮರಗಳನ್ನು



2005ರ ಅಂತಾರಾಷ್ಟ್ರೀಯ ಸಹಕಾರ ದಿನದ ಧ್ಯೆಯ: "ಸಹಕಾರ / ಸಹಕಾರ ಸಂಘಗಳು : ಉತ್ತಮ ಜಗತ್ತಿಗಾಗಿ ಒಳಗೊಳ್ಳುವ ಮತ್ತು ಸುಸ್ಥಿರ ಪರಿಹಾರಗಳನ್ನು ಒದಗಿಸುತ್ತವೆ."

ನಡೆವುದು, ನೆಡುವುದನ್ನು ಉತ್ತೇಜಿಸುವುದು, ನೀರಿನ ಸದ್ಬಳಕೆ, ಪೋಲಾಗುವುದನ್ನು ತಡೆಗಟ್ಟುವುದು, ಜಲ ಸಂಪನ್ಮೂಲಗಳನ್ನು ಕಾಪಾಡುವುದು, ರಕ್ಷಿಸುವುದನ್ನು ಉತ್ತೇಜಿಸುವುದು. ಪರಿಸರ ಕುಲಷಿತವಾಗದಂತೆ ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವುದು. ಈ ಅನೇಕ ಉಪಕ್ರಮಗಳಿಂದ ಭಾರತದಲ್ಲಿ ಸಹಕಾರ ವಲಯವು ಭಾರತದ ಆರ್ಥಿಕ ಪ್ರಗತಿ ಸುಸ್ಥಿರ ಅಭಿವೃದ್ಧಿಗೆ ತನ್ಮೂಲಕ ವಿಶ್ವಕ್ಕೆ ಕೊಡುಗೆ ಈಗಾಗಲೇ ನೀಡುತ್ತಿದೆಯಾದರೂ ಮತ್ತೂ ಸಾಕಷ್ಟು ಅವಕಾಶಗಳಿದ್ದು ಇತರೆ ಸೇವಾ ವಲಯಗಳಿಗೂ, ಅಸಂಘಟಿತ ವಲಯಗಳಿಗೂ ವಿಸ್ತರಿಸಬೇಕಾದ ಮತ್ತು ಹಾಲಿ ಕಾರ್ಯ ನಿರ್ವಹಿಸುತ್ತಿರುವ ವಲಯಗಳು ವಿಸ್ತಾರಗೊಳ್ಳಬೇಕಾದ ಮತ್ತು ಅವಸಾನದ ಅಂಚಿನಲ್ಲಿರುವ ವಲಯಗಳು ಪುನಶ್ಚೇತನ ಗೊಳಿಸಬೇಕಾದ ಅವಶ್ಯಕತೆ ಇದೆ. ಕೇಂದ್ರ ಸರ್ಕಾರವು ಅನೇಕ ಉಪಕ್ರಮಗಳನ್ನು ತೆಗೆದುಕೊಂಡು ನೂತನ ಉನ್ನತ ಸಹಕಾರ ಸಂಸ್ಥೆಗಳನ್ನು ಸ್ಥಾಪಿಸಿದ್ದು ಅದರ ಸದುಪಯೋಗವನ್ನು ರಾಷ್ಟ್ರದಾದ್ಯಂತ ಇರುವ ಸಹಕಾರ ಸಂಸ್ಥೆಗಳು ಇದರ ಪ್ರಯೋಜನ ಗಳನ್ನು ಪಡೆಯಬೇಕಾಗಿದೆ. ಇದರಿಂದ ಸಹಕಾರ ವಲಯ ಸುಸ್ಥಿರ ಅಭಿವೃದ್ಧಿಗೆ ತನ್ನ ಕೊಡುಗೆ ನೀಡುವುದಲ್ಲದೆ 'ಅಂತರಾಷ್ಟ್ರೀಯ ಸಹಕಾರ ದಿನ'ವನ್ನು ಅರ್ಥಪೂರ್ಣವಾಗಿ ಆಚರಿಸದಂತಾಗುತ್ತದೆ.

**ನೊಂದವರ ಗುಡಿಸಲಲಿ ಹಚ್ಚು ಪ್ರೀತಿಯ ಹಣತೆ;**
**ಹಂಚುತಿರು ಹಿರಿಕನಸ ಆ ಬೆಳಕಿನಲ್ಲಿ,**
**ಕಳೆದು ಕತ್ತಲೆ ಮತ್ತೆ ಮೂಡದೇ ಹೊಂಗಿರಣ?**
**ಬಾಳು ಭರವಸೆ ಜ್ಯೋತಿ – ಮುದ್ದುರಾಮ**

**– ಕೆ.ಸಿ. ಶಿವಪ್ಪ.**

## ಕರ್ನಾಟಕ–ನಿರೀಕ್ಷೆಗೂ ಮೀರಿದ ಸಾಧನೆ



ಕ್ಷೀರಕ್ರಾಂತಿಯ ಫಲವಾಗಿ ಕರ್ನಾಟಕವು ಮಹತ್ವದ ಪಾತ್ರವನ್ನು ವಹಿಸುತ್ತಿದೆ. ರಾಜ್ಯದಲ್ಲಿ ಹಾಲಿನ ಉತ್ಪಾದನೆ ನಿರೀಕ್ಷೆಗೂ ಮೀರಿ ಹೆಚ್ಚಳ ಕಂಡಿದೆ. ಹಾಲು ಮಹಾಮಂಡಳವು ಹಾಲು ಸಂಗ್ರಹಣೆಯಲ್ಲಿ ದಾಖಲೆ ನಿರ್ಮಿಸಿದೆ. ಕೆಎಂಎಫ್‌ನ ನಿತ್ಯದ ಹಾಲು ಸಂಗ್ರಹಣೆಯು ಒಂದು ಕೋಟಿ ಲೀಟರ್ ದಾಟಿ ಇತಿಹಾಸ ಸೃಷ್ಟಿಸಿದೆ.

ಕರ್ನಾಟಕ ರಾಜ್ಯದಲ್ಲಿಯೇ ಇಪ್ಪತ್ತಾರು ಲಕ್ಷಕ್ಕೂ ಅಧಿಕ ಕುಟುಂಬಗಳು ಸಹಕಾರಿ ಹೈನೋದ್ಯಮದ ಭಾಗವಾಗಿ ಹಾಲು ಉತ್ಪಾದನೆಯಲ್ಲಿ ತೊಡಗಿಸಿಕೊಂಡಿವೆ. ರಾಜ್ಯದ 15 ಜಿಲ್ಲಾ ಸಹಕಾರ ಹಾಲು ಒಕ್ಕೂಟಗಳಡಿಯಲ್ಲಿ, ಗ್ರಾಮೀಣ ಮಟ್ಟದಲ್ಲಿ ಕಾರ್ಯಾಚರಣೆಯಲ್ಲಿರುವ 15779ಕ್ಕೂ ಹೆಚ್ಚಿನ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಕರ್ನಾಟಕ ಹಾಲು ಮಹಾಮಂಡಳಿಯು 26.89 ಲಕ್ಷ ಹಾಲು ಉತ್ಪಾದಕರನ್ನು ಹೊಂದಿದೆ. ಈ ಬಾರಿ ಮೇ ಮಾಹೆಯಿಂದಲೇ ಬೇಸಿಗೆಯಲ್ಲಿ ಉತ್ತಮ ಮಳೆಯಾಗಿದ್ದು, ಹಸಿರು ಮೇವಿನ ಕೊರತೆ ಉಂಟಾಗಲಿಲ್ಲ, ಇದರಿಂದಾಗಿ ಹಸುಗಳು ಆರೋಗ್ಯವಾಗಿ ಇದ್ದು, ಹೆಚ್ಚಿನ ಪ್ರಮಾಣದಲ್ಲಿ ಹಾಲು ನೀಡುತ್ತಿವೆ. ಸಂಗ್ರಹವಾದ ಹೆಚ್ಚುವರಿ ಹಾಲನ್ನು ಹಾಲಿನ ಪುಡಿ, ತುಪ್ಪ, ಮೊಸರು ಮುಂತಾದ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಲು ಬಳಸಲಾಗುತ್ತಿದೆ.

# ವಿಶ್ವದಲ್ಲಿಯೇ ಹಾಲು ಉತ್ಪಾದನೆಯಲ್ಲಿ ಗಮನ ಸೆಳೆದ ಭಾರತ

## ಕರ್ನಾಟಕದ ನಂದಿನಿ ದೇಶದಲ್ಲಿಯೇ ಆಹಾರ ಮತ್ತು ಪಾನೀಯಗಳಲ್ಲಿ 4ನೇ ಸ್ಥಾನ ಹಾಗೂ ಟಾಪ್ 100 ಭಾರತೀಯ ಬ್ರ್ಯಾಂಡ್‌ನಲ್ಲಿ 38ನೇ ಸ್ಥಾನ

ಭಾರತ ಕೃಷಿ ಪ್ರಧಾನ ರಾಷ್ಟ್ರವಾಗಿದ್ದು, ಅದರ ಉಪಕಸುಬುಗಳಲ್ಲಿ ಒಂದಾಗಿರುವ ಹೈನುಗಾರಿಕೆ ಇಂದು ಬೃಹದಾಕಾರವಾಗಿ ಬೆಳೆದು ಹೈನೋದ್ಯಮದ ಸ್ವರೂಪ ಪಡೆಯುವ ಮೂಲಕ ದೇಶದ ಅಭಿವೃದ್ಧಿಯಲ್ಲಿ ತನ್ನ ಅಮೂಲ್ಯ ಕೊಡುಗೆಯನ್ನು ನೀಡುತ್ತಾ ಬಂದಿದೆ. ಹಾಲು ಉತ್ಪಾದನೆಯಲ್ಲಿ ನಮ್ಮ ದೇಶವನ್ನು ಜಾಗತಿಕವಾಗಿ ಮುನ್ನಡೆಸುವ ಡೈರಿ ಸಹಕಾರಿ ಹೈನುಗಾರಿಕೆ ಆಂದೋಲನವು ವಿಶ್ವದಾದ್ಯಂತ ಇಂದು ಮಾದರಿಯಾಗಿದೆ. ಸಹಕಾರಿ ತತ್ವವು ಸುಸ್ಥಿರ ಆರ್ಥಿಕಾಭಿವೃದ್ಧಿ ಗುರಿಯ ಕೇಂದ್ರವಾಗಿದ್ದು, ಇಂದು ಎಲ್ಲಾ ಕ್ಷೇತ್ರಗಳಿಗೂ ಅನ್ವಯವಾಗಲಿದೆ. ನಗರ ಪ್ರದೇಶವೇ ಇರಲಿ, ಗ್ರಾಮೀಣ ಪ್ರದೇಶ ಯಾವುದೇ ಇರಲಿ ಅಲ್ಲಿನ ಪ್ರಗತಿಗೆ ಸಹಕಾರ ಅತ್ಯವಶ್ಯ. ಹೈನುಗಾರಿಕೆಯು ಕೋಟ್ಯಂತರ ಗ್ರಾಮೀಣ ಜನರ ಕುಟುಂಬಗಳಿಗೆ, ವಿಶೇಷವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ, ಮಹಿಳೆಯರಿಗೆ, ಭೂರಹಿತರಿಗೆ, ಕಾರ್ಮಿಕರಿಗೆ ಜೀವನಾಧಾರದ ಪ್ರಾಥಮಿಕ ಮೂಲವಾಗಿದೆ. ಹೈನುಗಾರಿಕೆಯು ಸ್ಥಿರವಾದ ಆದಾಯ, ಉದ್ಯೋಗ ಮತ್ತು ಜೀವನಾಂಶವನ್ನು ಒದಗಿಸುತ್ತದೆ.

ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ತೀವ್ರ ಹಾಲಿನ ಕೊರತೆ ಎದುರಿಸುತ್ತಿದ್ದ ಭಾರತ, ಇಂದು ವಿಶ್ವದಲ್ಲಿಯೇ ಅತಿ ಹೆಚ್ಚು ಹಾಲು ಉತ್ಪಾದನೆ ಮತ್ತು ಬಳಕೆ ಮಾಡುತ್ತಿರುವ ರಾಷ್ಟ್ರವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇಂತಹ ಸಾಧನೆಯಲ್ಲಿ ಸಹಕಾರಿ ಹೈನೋದ್ಯಮದ್ದು ಸಿಂಹಪಾಲಿದೆ. ಗುಜರಾತ್‌ನ 'ಅಮೂಲ್'ನ ನಂತರದ ಎರಡನೆಯ ಸ್ಥಾನದಲ್ಲಿ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳವಾಗಿದೆ.



ಪ್ರಸ್ತುತ ವರ್ಷಗಳಲ್ಲಿ ವಿಶ್ವದಲ್ಲಿಯೇ ಹೆಚ್ಚು ಹಾಲು ಉತ್ಪಾದಿಸುವ ರಾಷ್ಟ್ರವೆಂದರೆ ಭಾರತ. ಭಾರತವು ಹಾಲಿನ ಉತ್ಪಾದನೆಯು ಅಂದಾಜು 216.5 ಮಿಲಿಯನ್ ಮೆಟ್ರಿಕ್ ಟನ್‌ಗಳು ಎಂದು ಅಂದಾಜಿಸಲಾಗಿದೆ. ಈ ಮೂಲಕ ವಿಶ್ವದಲ್ಲಿಯೇ ಭಾರತವು ಅತೀ ಹೆಚ್ಚು ಹಾಲು ಉತ್ಪಾದಿಸುವ ದೇಶವಾಗಿದೆ.

# ಒಂದು ಕೋಟಿಗೂ ಅಧಿಕ ಹಾಲು ಉತ್ಪಾದನೆ



ಕೆಎಂಎಫ್ ದಿನವೊಂದಕ್ಕೆ ಒಂದು ಕೋಟಿ ಲೀಟರ್‌ಗಿಂತ ಹೆಚ್ಚು ಹಾಲು ಸಂಗ್ರಹಿಸಿ ಹೊಸ ದಾಖಲೆ ಬರೆದಿದೆ. ಮುಂಗಾರು ಮಳೆಯಿಂದಾಗಿ ಹಾಲಿನ ಉತ್ಪಾದನೆ ಹೆಚ್ಚಾಗಿದೆ. ಹೈನುಗಾರರ ಹಿತದೃಷ್ಟಿಯಿಂದ ಕರ್ನಾಟಕ ಸರ್ಕಾರ ಹೈನುಗಾರರು ಹಾಲು ಉತ್ಪಾದಕ ಸಹಕಾರ ಸಂಘಕ್ಕೆ ಹಾಕುವ ಪ್ರತಿ ಲೀಟರ್ ಹಾಲಿನ ಮೇಲೆ 5 ರೂ.ಗಳ ಸಹಾಯಧನವನ್ನು ನೀಡಿ ಪ್ರೋತ್ಸಾಹಿಸುತ್ತಿದೆ. ಸರ್ಕಾರದ ಪ್ರೋತ್ಸಾಹದಿಂದ ಹೈನುಗಾರರ ಆರ್ಥಿಕ ಸ್ಥಿತಿ ಉತ್ತಮಗೊಂಡಿದೆ. ಕರ್ನಾಟಕವೊಂದರಲ್ಲಿಯೇ ಸಹಕಾರಿ ಸಂಘಗಳ ಮೂಲಕ ರೈತರಿಗೆ ಪ್ರತಿನಿತ್ಯ ಪಾವತಿಯಾಗುತ್ತಿರುವ ಮೊತ್ತ 28 ಕೋಟಿಗಿಂತಲೂ ಅಧಿಕವಾಗಿದ್ದು, ರೈತರು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಕಾರಣವಾಗಿದೆ. ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿ ನೆರವು ಮತ್ತು ಮಾರ್ಗದರ್ಶನದೊಂದಿಗೆ ಶ್ಲಾಘನೀಯ ಸಾಧನೆ ಗಳಿಸಿದೆ.

## ಅಧಿಕ ಹಾಲು ಉತ್ಪಾದನೆಗೆ ಕಾರಣಗಳು

ಕ್ಷೀರಕ್ರಾಂತಿ ಅಂದ್ರೆ ಕೆಎಂಎಫ್ ಒಂದು ಕೋಟಿ ಲೀಟರ್‌ಗಿಂತ ಹೆಚ್ಚು ಹಾಲು ಸಂಗ್ರಹಿಸಿದೆ ಈ ಸಾಧನೆ ಮುಂಗಾರು ಮಳೆ ಮತ್ತು ಹಸಿರು ಮೇವಿನ ಲಭ್ಯತೆಯಿಂದ ಸಾಧ್ಯವಾಗಿದೆ. ಕೆಎಂಎಫ್‌ನ ಸಾಧನೆಯಿಂದಾಗಿ, ರಾಜ್ಯದಲ್ಲಿ ಹಾಲಿನ ಉತ್ಪಾದನೆ ಮತ್ತು ಸಂಗ್ರಹಣೆ ಹೆಚ್ಚಾಗಿದೆ. ಬಹುತೇಕ ರೈತರಿಗೆ ಹೈನುಗಾರಿಕೆ ಉಪ ಕಸುಬು, ಸರ್ಕಾರ ಹಾಲಿಗೆ ನೀಡುವ 5 ರೂ. ಪ್ರೋತ್ಸಾಹಧನ. ಹಾಲು, ಹಾಲಿನ ಉತ್ಪಾದನೆಗೆ ಉತ್ತಮ ಬೆಲೆ, ಹಸು ಖರೀದಿಗೆ ಬ್ಯಾಂಕ್-ಸರ್ಕಾರ ನೀಡುವ ಸಾಲ ಜನರನ್ನು ಹೈನುಗಾರಿಕೆಯತ್ತ ಸೆಳೆಯುತ್ತಿದೆ. ಕಬ್ಬು, ಭತ್ತ, ರಾಗಿ ಬೆಳೆ ಹೆಚ್ಚು ಬೆಳೆಯುವುದರಿಂದ ಮೇವಿಗೆ ಸಮಸ್ಯೆಯಿಲ್ಲ, ಹಾಲಿನ ಕೊಬ್ಬಿನಾಂಶ ಆಧರಿಸಿ ಪ್ರತಿ ಲೀಟರ್‌ಗೆ 35.05ರೂ. ನಿಂದ 50.30ರೂ.ವರೆಗೆ ಉತ್ಪಾದಕರಿಗೆ ಹಾಲಿನ ದರ ಪಾವತಿಸಲಾಗುತ್ತಿದೆ. ಎಂಪಿಸಿಎಸ್‌ಗಳಿಗೆ ನಿರ್ವಹಣಾ ವೆಚ್ಚವಾಗಿ ಪ್ರತಿ ಲೀಟರ್‌ಗೆ 85 ಪೈಸೆ ನೀಡಲಾಗುತ್ತಿದೆ. ಹೀಗಾಗಿ ಜನರು ಹೈನುಗಾರಿಕೆಯಲ್ಲಿ ತೊಡಗುವುದು ಹೆಚ್ಚಿದೆ. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳಲು ಹಿತಾಸಕ್ತಿ ಮೂಡಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ವಿದ್ಯಾವಂತರು ಸಹ ಹೈನುಗಾರಿಕೆಯತ್ತ ಒಲವು ಮೂಡಿಸಿಕೊಳ್ಳುತ್ತಿದ್ದಾರೆ.



## ನಂದಿನಿ ತುಪ್ಪಕ್ಕೆ ಮತ್ತೆ ಹೆಚ್ಚಿದ ಬೇಡಿಕೆ




ಪ್ರಸ್ತುತ ಕೆ.ಎಂ.ಎಫ್. 150ಕ್ಕೂ ಅಧಿಕ ಹಾಲಿನ ಉತ್ಪನ್ನಗಳನ್ನು ತನ್ನ ಸಹಕಾರಿ ಹಾಗೂ ಕಾರ್ಪೋರೇಟ್ ಬ್ರಾಂಡ್ 'ನಂದಿನಿ' ಹೆಸರಿನಲ್ಲಿ ಮಾರುಕಟ್ಟೆಗೆ ಪರಿಚಯಿಸಿದೆ. ಕೆಎಂಎಫ್‌ನ ಈ ಹಾಲು ಮತ್ತು ಹಾಲಿನ ಉತ್ಪನ್ನಗಳು ಇಂದು ದೇಶ-ವಿದೇಶಗಳಲ್ಲಿ ಕೋಟ್ಯಂತರ ಜನರನ್ನು ಪ್ರತಿನಿತ್ಯ ತಲುಪುತ್ತಾ ಮನೆಮಾತಾಗಿರುತ್ತದೆ. ಕರ್ನಾಟಕ ಹಾಲು ಮಹಾಮಂಡಳಿಯು ಸಹಕಾರಿ ಸಂಘಗಳಿಂದ ಗುಣಮಟ್ಟದ ಹಾಲಿನ ಶೇಖರಣೆ ಮಾಡುವಲ್ಲಿ ಕ್ರಾಂತಿ ಮಾಡಿದೆ. ಈ ಈಗಾಗಲೇ ದುಬೈನಲ್ಲಿ ನಂದಿನಿ ಕೆಫೆ ಆರಂಭಿಸಲಾಗಿದೆ. ಸಾಗರದಾಚೆಯು ಬೇಡಿಕೆ ಹೆಚ್ಚುತ್ತಿರುವುದು ಸಂತಸದ ಸಂಗತಿ. ಇತ್ತೀಚೆಗೆ ಅಷ್ಟೇ, ತಿರುಪತಿ ತಿಮ್ಮಪ್ಪನ ದೇವಸ್ಥಾನದಲ್ಲಿ ಸಿಗುವ ವಿಶ್ವ ಪ್ರಸಿದ್ಧ ತಿರುಪತಿ ಪ್ರಸಾದವಾದ ಲಡ್ಡು ತಯಾರಿಕೆಗೆ ಮತ್ತೆ ಕರ್ನಾಟಕದ ಹೆಮ್ಮೆಯ ನಂದಿನಿ ತುಪ್ಪ ಪೂರೈಕೆಯಾಗುತ್ತಿದೆ. ನಂದಿನಿ ಉತ್ಪನ್ನ ಹಾಗೂ ನಂದಿನಿ ತುಪ್ಪಕ್ಕೆ ದೇಶದ ವಿವಿಧ ರಾಜ್ಯಗಳಲ್ಲಿ ಬೇಡಿಕೆ ಹೆಚ್ಚಾಗಿದೆ. ಈಗ ಬರೋಬ್ಬರಿ 10 ಲಕ್ಷ ಕೆ.ಜಿ ತುಪ್ಪಕ್ಕೆ ತಿರುಪತಿ ತಿರುಮಲ ದೇವಸ್ಥಾನ ಟ್ರಸ್ಟ್ ಟಿಟಿಡಿ ಬೇಡಿಕೆ ಇಟ್ಟಿದೆ. ಹಿನ್ನೆಲೆಯಲ್ಲಿ ಕರ್ನಾಟಕ ಹಾಲು ಮಹಾಮಂಡಳ ತಿರುಪತಿಗೆ ಅಗತ್ಯ ತುಪ್ಪವನ್ನು ಕಳುಹಿಸಿಕೊಟ್ಟಿದೆ. ಇದರಲ್ಲಿ 2.50 ಲಕ್ಷ ಕಿಲೋ ತುಪ್ಪ ಪೂರೈಸುವ ಸಿಂಹಪಾಲಿನ ಅವಕಾಶ ಮಂಡ್ಯ ಜಿಲ್ಲಾ ಹಾಲು ಒಕ್ಕೂಟಕ್ಕೆ (ಮನ್‌ಮುಲ್) ದೊರೆತಿದೆ. ಇದೇ ಮೊದಲ ಬಾರಿಗೆ ನೇರವಾಗಿ ತುಪ್ಪ ಪೂರೈಸುವ ಅವಕಾಶವನ್ನು ಕೆಎಂಎಫ್ ತನ್ನ ವ್ಯಾಪ್ತಿಯ ಹಾಲು ಒಕ್ಕೂಟಗಳಿಗೆ ಕಲ್ಪಿಸಿದೆ.




ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳದ "ನಂದಿನಿ" ದೇಶದ ಆಹಾರ ಮತ್ತು ಪಾನೀಯ ವಿಭಾಗದ ಮುಂಚೂಣಿಯ ಬ್ರ್ಯಾಂಡ್‌ಗಳಲ್ಲಿ ನಾಲ್ಕನೇ ಸ್ಥಾನವನ್ನು ಭದ್ರಪಡಿಸಿಕೊಂಡಿದೆ. ಅಪ್ಪಟ ಕನ್ನಡ ಬ್ರ್ಯಾಂಡ್ ನಂದಿನಿಯು ರೂ.9,009.65 ಕೋಟಿ ಮೌಲ್ಯದೊಂದಿಗೆ 'ಬ್ರ್ಯಾಂಡ್ ಫೈನಾನ್ಸ್ 2025'ರ ಪಟ್ಟಿಯಲ್ಲಿ 38ನೇ ಸ್ಥಾನಕ್ಕೆ ಏರಿದೆ. ಆಹಾರ ಮತ್ತು ಪಾನೀಯ ವಿಭಾಗದಲ್ಲಿ 4ನೇ ಸ್ಥಾನ ಪಡೆದಿರುವ ನಂದಿನಿಯು ಅಮುಲ್, ಬ್ರಿಟಾನಿಯಾ ಮತ್ತು ಮದರ್ ಡೈರಿಗಳಂತಹ ದೊಡ್ಡ ಬ್ರ್ಯಾಂಡ್‌ಗಳ ಜೊತೆಗೆ ಸ್ಪರ್ಧಿಸುತ್ತಿದೆ. ನಂದಿನಿಯು ಜಾಗತಿಕ ಮಟ್ಟದಲ್ಲಿ ಗುರುತಿಸಲ್ಪಟ್ಟಿರುವುದು ಸರ್ಕಾರದ ಸಂಕಲ್ಪ, ರೈತರ ಶ್ರಮ ಮತ್ತು ಹೆಚ್ಚುತ್ತಿರುವ ಗ್ರಾಹಕರ ವಿಶ್ವಾಸಾರ್ಹತೆಯ ಪ್ರತಿಬಿಂಬವಾಗಿದೆ. ಕರ್ನಾಟಕ ರಾಜ್ಯದ ಹೈನುಗಾರರಿಂದ ಯಶಸ್ವಿಯಾಗಿ ನಿರ್ವಹಣೆಯಾಗುತ್ತಿರುವ ಹಾಲು ಮಹಾಮಂಡಳ ಇಡೀ ದಕ್ಷಿಣ ಭಾರತದಲ್ಲಿನ ಸಹಕಾರಿ ಹಾಲು ಮಹಾಮಂಡಳಿಗಳಲ್ಲಿ ಅಗ್ರಸ್ಥಾನದಲ್ಲಿರುತ್ತದೆ. ಹೈನು ಅಭಿವೃದ್ಧಿಯ ಮುಖೇನ ಗ್ರಾಮೀಣ ಪ್ರದೇಶಗಳ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿದೆ.

**– ಸಿದ್ದರಾಮಯ್ಯ, ಕರ್ನಾಟಕ ರಾಜ್ಯದ ಮುಖ್ಯಮಂತ್ರಿ**

## ಆಹಾರ ಮತ್ತು ಪಾನೀಯಗಳಲ್ಲಿ 4ನೇ ಮತ್ತು 100ರ ಪಟ್ಟಿಯಲ್ಲಿ ನಂದಿನಿಗೆ 38ನೇ ಸ್ಥಾನ

ಕರ್ನಾಟಕದ ಹೆಮ್ಮೆಯ ರಾಜ್ಯ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತನ (KMF) ನಂದಿನಿ ದೇಶದ ಆಹಾರ ಮತ್ತು ಪಾನೀಯ ವಿಭಾಗದ ಮುಂಚೂಣಿಯ ಬ್ರ್ಯಾಂಡ್‌ಗಳಲ್ಲಿ ನಾಲ್ಕನೇ ಸ್ಥಾನವನ್ನು ಭದ್ರಪಡಿಸಿಕೊಂಡಿದೆ. ಲಂಡನ್ ಮೂಲದ ಪ್ರಮುಖ ಬ್ರ್ಯಾಂಡ್ ಮೌಲ್ಯಮಾಪನ ಸಲಹಾ ಸಂಸ್ಥೆ ಬ್ರ್ಯಾಂಡ್ ಫೈನಾನ್ಸ್ ಬಿಡುಗಡೆ ಮಾಡಿದ ಇತ್ತೀಚಿನ ವರದಿಯಲ್ಲಿ ಜಾಗತಿಕ ಖಚಿಟಿಞಇಟಿರ ನಲ್ಲಿ ಭಾರಿ ಮುನ್ನಡೆ ಸಾಧಿಸಿದೆ. ಕಳೆದ ವರ್ಷ 43ನೇ ಸ್ಥಾನದಲ್ಲಿದ್ದ ನಂದಿನಿ, ಈ ಬಾರಿ 38ನೇ ಸ್ಥಾನಕ್ಕೆ ಜಿಗಿದು ದೇಶದ ಅಗ್ರ 40 ಅತ್ಯಂತ ಮೌಲ್ಯಯುತ ಭಾರತೀಯ ಬ್ರ್ಯಾಂಡ್ ಗಳಲ್ಲಿ ಒಂದಾಗಿದೆ. ಬ್ರ್ಯಾಂಡ್ ಮೌಲ್ಯವು ಕಳೆದ ವರ್ಷಕ್ಕಿಂತ 139 ಮಿಲಿಯನ್ ಡಾಲರ್ ಹೆಚ್ಚಳವಾಗಿದ್ದು, ಒಟ್ಟು 1, 079 ಮಿಲಿಯನ್ ಡಾಲರ್ (ರೂ. 9,226 ಕೋಟಿಗೆ ತಲುಪಿದೆ. ಆಹಾರ ಮತ್ತು ಪಾನೀಯ ವಿಭಾಗದಲ್ಲಿ ಅಮುಲ್ ನಂಬರ್ 1 ಸ್ಥಾನದಲ್ಲಿದ್ದರೆ, ಮದರ್ ಡೈರಿ 2, ಬ್ರಿಟನಿಯಾ 3 ಸ್ಥಾನದಲ್ಲಿದ್ದು, ಡಾಬರ್ ಐದನೇ ಸ್ಥಾನದಲ್ಲಿರುವುದಾಗಿ ಏಒಈ ಹೇಳಿಕೆಯಲ್ಲಿ ತಿಳಿಸಿದೆ. ನಂದಿನಿ ಬ್ರ್ಯಾಂಡ್‌ನ ನಿರಂತರ ಕಾರ್ಯಕ್ಷಮತೆ ಮತ್ತು ಮೌಲ್ಯದಲ್ಲಿನ ಬೆಳವಣಿಗೆ ದಕ್ಷಿಣ ಭಾರತದಾದ್ಯಂತ ಮತ್ತು ಅದರಾಚೆಗಿನ ಹೆಚ್ಚುತ್ತಿರುವ ಬ್ರ್ಯಾಂಡ್ ಇಕ್ವಿಟಿ ಮತ್ತು ವಿಶ್ವಾಸವನ್ನು ಎತ್ತಿ ತೋರಿಸುತ್ತದೆ. ಇದು ನಂದಿನಿ ಬ್ರ್ಯಾಂಡ್‌ನ ನಿರಂತರ ಬೆಳವಣಿಗೆ ಮತ್ತು ಗ್ರಾಹಕರ ವಿಶ್ವಾಸಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎಂದು ಕೆಎಂಎಫ್ ಅಧಿಕಾರಿಗಳು ತಿಳಿಸಿದ್ದಾರೆ.

## ಮಹಿಳಾ ಸಬಲೀಕರಣಕ್ಕಾಗಿ ಹೈನುಗಾರಿಕೆ

ಇತ್ತೀಚಿನ ವರ್ಷಗಳಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ಹೆಚ್ಚುತ್ತಿರುವ ಬೇಡಿಕೆಯು ಗ್ರಾಮೀಣ ಮಹಿಳೆಯರಿಗೆ ಲಾಭದಾಯಕ ಉದ್ಯಮವಾಗಿದೆ. ಡೈರಿ ಉತ್ಪಾದನೆಯಲ್ಲಿ ಮಹಿಳೆಯರು ಒಟ್ಟು ಉದ್ಯೋಗದಲ್ಲಿ ಶೇ.93ರಷ್ಟಿದ್ದಾರೆ. ಆರ್ಥಿಕ ಸ್ಥಿತಿಗೆ ಅನುಗುಣವಾಗಿ ಮಹಿಳೆಯರು ಮೇವು ಸಂಗ್ರಹಿಸುವ, ಸಗಣಿ ಸಂಗ್ರಹಿಸುವ ಮತ್ತು ಸಂಸ್ಕರಿಸುವ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಸಾವಯವ ಅವಶೇಷಗಳೊಂದಿಗೆ ಸಗಣಿ ಬೆರೆಸಿ ಮಹಿಳೆಯರು ಅಡುಗೆ ಇಂಧನವನ್ನು ಸಹ ತಯಾರಿಸುತ್ತಾರೆ. ಮಹಿಳೆಯರನ್ನು ಡೈರಿ ಸಹಕಾರ ಸಂಘಗಳ ಸದಸ್ಯರನ್ನಾಗಿ ಗುರುತಿಸುವುದು, ಇದರಿಂದ ಸಂಘಕ್ಕೆ ಸರಬರಾಜು ಮಾಡುವ ಹಾಲಿನ ಬೆಲೆಯನ್ನು ನೇರವಾಗಿ ಮಹಿಳೆಯರಿಗೆ ಪಾವತಿಸಬಹುದಾಗಿದೆ. ಇದರಿಂದ ಮಹಿಳಾ ಉದ್ಯಮಿಗಳು ಡೈರಿ ಉದ್ಯಮವನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡಿದ್ದಂತೆ ಆಗಿದೆ.

ಹೀಗಾಗಿ, ಸಹಕಾರಿ ಹೈನುಗಾರಿಕೆಗೆ ಮಹಿಳೆಯರು ಶಕ್ತಿ ತುಂಬುತ್ತಿದ್ದಾರೆ. ಹಾಲು ಉತ್ಪಾದನೆಯಿಂದ ರೈತರ, ಗ್ರಾಮೀಣ ಜನರ ಆರ್ಥಿಕ ಸ್ಥಿತಿ ಉತ್ತಮಗೊಳ್ಳುತ್ತಿದ್ದು, ಹೈನೋದ್ಯಮಕ್ಕೆ ಉತ್ತಮ ಭವಿಷ್ಯವಿರುವುದು ನಿಚ್ಚಳವಾಗಿದೆ.